
ದೆಹಲಿ ಕರ್ನಾಟಕ ಸಂಘದ

# ಅಭಿಮತ

ಜನವರಿ 2020
ಬೆಲೆ ರೂ. 1




ಕೃಷ್ಣೈಕ್ಯರಾದ ಪೇಜಾವರ ಶ್ರೀ

## ಮಾಜಿ ಅಧ್ಯಕ್ಷ ಎನ್.ಪಿ.ಭಟ್ ವಿಧಿವಶ




ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ ಮಹಾರಾಷ್ಟ್ರದ ಅಕ್ಕಲಕೋಟದಲ್ಲಿ ದಿನಾಂಕ 21 ಹಾಗೂ 22 ಡಿಸೆಂಬರ್ 2019ರಲ್ಲಿ ಆಯೋಜಿಸಿದ ಅಖಿಲ ಭಾರತ ಹೊರನಾಡ ಕನ್ನಡ ಸಂಘಗಳ ಎಂಟನೇ ಮಹಾಮೇಳ ಜರಗಿತ್ತು. ದೆಹಲಿ ಕರ್ನಾಟಕ ಸಂಘದ ಪ್ರತಿನಿಧಿಯಾಗಿ ಕಾರ್ಯಕಾರಿ ಸಮಿತಿಯ ಸದಸ್ಯ ಶಿವಾನಂದ ಇಂಗಳೇಶ್ವರ ಅವರು ಭಾಗವಹಿಸಿದರು. ಅವರು ಹೊರನಾಡ ಕನ್ನಡಿಗರ ಸಮಸ್ಯೆಗಳ ಕುರಿತು ವಿಷಯ ಮಂಡಿಸಿ ಚರ್ಚೆಯಲ್ಲಿ ಮಾತನಾಡಿದರು.



ದೆಹಲಿಯ ಸಫ್ದರ್‌ಜಂಗ್‌ನಲ್ಲಿರುವ ಶ್ರೀ ಕೃಷ್ಣ ಮಂದಿರದ ಅರ್ಚಕರಾಗಿ ಜನಪ್ರಿಯರಾಗಿರುವ ಶ್ರೀ ನಾರಾಯಣ ಆಚಾರ್ಯ ಅವರಿಗೆ ಉಡುಪಿಯ ಅಷ್ಟಮಠಗಳಲ್ಲಿ ಒಂದಾದ ಪಾಲಿಮಾರು ಮಠದ ಶ್ರೀ ವಿದ್ಯಾಧೀಶ ತೀರ್ಥ ಸ್ವಾಮೀಜಿ ಅವರು ದಿನಾಂಕ 20.11.2019 ರಂದು 'ಶ್ರೀಕೃಷ್ಣಾನುಗ್ರಹ' ಪ್ರಶಸ್ತಿ ನೀಡಿ ಗೌರವಿಸಿದರು. ಶ್ರೀ ನಾರಾಯಣ ಆಚಾರ್ಯ ಅವರಿಗೆ ದೆಹಲಿ ಕರ್ನಾಟಕ ಸಂಘದ ಹಾರ್ದಿಕ ಅಭಿನಂದನೆಗಳು.

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಪ್ರಧಾನ ಸಂಪಾದಕ
ಡಾ. ಅವನೀಂದ್ರನಾಥ್ ರಾವ್

ಸಂಪಾದಕ ಮಂಡಳ ಸದಸ್ಯರು
ಸಂತೋಷ್ ಕುಮಾರ್ ಉಪಾಧ್ಯಾಯ
ಎಸ್. ಕುಮಾರ್
ಚಂದ್ರಶೇಖರ ಜೋಳದರಾಶಿ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷ
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಡಾ. ಅವನೀಂದ್ರನಾಥ್ ರಾವ್
ಜಮುನಾ ಸಿ. ಮಠದ

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಕೋಶಾಧಿಕಾರಿ
ಆಶಾಲತಾ ಎಂ.

ಜಂಟಿ ಕಾರ್ಯದರ್ಶಿಗಳು
ರಾಧಾಕೃಷ್ಣ
ಪೂಜಾ ರಾವ್

ಸಮಿತಿ ಸದಸ್ಯರು
ಡಾ. ಎಂ.ಎಸ್. ಶಶಿಕುಮಾರ್
ಶಿವಾನಂದ ಎಸ್. ಇಂಗಳೇಶ್ವರ
ಶ್ರೀನಾಥ್ ಎನ್.ಆರ್
ಸವಿತಾ ನೆಲ್ಲಿ
ಶಿವಪ್ಪ ಎಂ.
ಸಂತೋಷ ಜೆ.
ಶೋಭಾ ಗೌಡ
ಸುಮಿತಾ ಮುರಗೋಡ
ಆರ್. ರೇಣುಕುಮಾರ್
ಟಿ.ಎಂ. ಮೈಲಾರಪ್ಪ

ಕಾವಲು ಸಮಿತಿ
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ

ಮುಖಪುಟ ಚಿತ್ರ ಕೃಪೆ
ಡಾ. ಪುರುಷೋತ್ತಮ ಬಿಳಿಮಲೆ

ಸಂಪುಟ 30 । ಸಂಚಿಕೆ 4
ಜನವರಿ 2020

# ಸಂಪಾದಕೀಯ

## ಸಮನ್ವಯ ಸಂತ

ಆಧ್ಯಾತ್ಮಿಕ ಚಿಂತನೆ ಮತ್ತು ಸಾಮಾಜಿಕ ಕಳಕಳಿಯಿಂದ ಆಧುನಿಕ ಕರ್ನಾಟಕವನ್ನು ಅನೇಕ ಸಾಧು ಸಂತರು ಪ್ರಭಾವಿಸಿದ್ದಾರೆ. ಅವರಲ್ಲಿ ಈಚೆಗೆ ಬೃಂದಾವನಸ್ಥರಾದ ಉಡುಪಿಯ ಅಷ್ಟಮಠಗಳಲ್ಲಿ ಒಂದಾದ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿಗಳು ಸಮಾಜದ ಆಗು ಹೋಗುಗಳಿಗೆ ನಿರಂತರ ಸ್ಪಂದಿಸುತ್ತಾ ಸಮಾಜ ಕಲ್ಯಾಣದಲ್ಲಿ ತೊಡಗಿಕೊಂಡು ಆದರ್ಶಪ್ರಾಯರಾಗಿದ್ದರು.

ಸಮಾಜದಲ್ಲಿ ಬೇರೂರಿರುವ ಒಂದು ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಾಯಿಸುವುದು ಕ್ರಾಂತಿಕಾರಿ ಎನಿಸುತ್ತದೆ. ಇಂತಹ ನಿರ್ಧಾರಗಳಿಗೆ ಕಠಿಣ ನಿಲುವುಗಳನ್ನು ತಾಳಬೇಕು. ಮಾತ್ರವಲ್ಲ ಕೆಲವೊಮ್ಮೆ ವ್ಯವಸ್ಥೆಯಿಂದ ಹೊರಬರಬೇಕಾದ ಅನಿವಾರ್ಯತೆ ಇರುತ್ತದೆ. ಆದರೆ ಸಮಾಜದಲ್ಲಿ ಪರಿವರ್ತನೆ ತರಲು ಪೇಜಾವರ ಶ್ರೀಗಳು ತಾವು ಅನುಸರಿಸುತ್ತಿದ್ದ ಮಾಧ್ವ ಬ್ರಾಹ್ಮಣ ಸಂಪ್ರದಾಯವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಲೇ ಸಮಾಜದಲ್ಲಿ ಇದ್ದ ಅಸಮಾನತೆಯನ್ನು ದೂರ ಮಾಡಲು ವಿಭಿನ್ನ ಆಚರಣೆ ಮತ್ತು ಯೋಜನೆಗಳನ್ನು ಜಾರಿಗೆ ತಂದರು. ಈ ಹಿನ್ನೆಲೆಯಲ್ಲಿ ಪೇಜಾವರ ಶ್ರೀಗಳನ್ನು ನಾವು 'ಸಮನ್ವಯ ಸಂತ'ರಾಗಿ ಕಾಣಬಹುದು.

ಪೇಜಾವರ ಶ್ರೀಗಳು ಶತಮಾನಗಳಿಂದ ಇದ್ದ ಅಮಾನವೀಯ 'ಮಡೆ ಸ್ನಾನ' ಆಚರಣೆಯ ಕುರಿತು ತಳೆದ ನಿಲುವು ಅವರ 'ಸಮನ್ವಯ' ಮತ್ತು ಸುಧಾರಣಾವಾದಿ ಧೋರಣೆಗೆ ಒಳ್ಳೆಯ ನಿದರ್ಶನ. ಎಂಜಲೆಯ ಮೇಲೆ ಉರುಳು ಸೇವೆ ಮಾಡುವ ಬದಲಿಗೆ ದೇವರಿಗೆ ಅರ್ಪಿಸಿದ ನೈವೇದ್ಯದ ಮೇಲೆ ಉರುಳು ಸೇವೆ ನಡೆಸುವ 'ಎಡೆ ಸ್ನಾನ' ಎಂಬ ಭಿನ್ನ ಆಚರಣೆಯನ್ನು ಅವರು ಜಾರಿಗೆ ತಂದರು. ಈ ಮೂಲಕ ಸಂಪ್ರದಾಯಸ್ಥರ ಮತ್ತು ಪ್ರಗತಿಪರರ ನಡುವಿನ ಸಂಘರ್ಷವನ್ನು ಕೊನೆಗಾಣಿಸಿ 'ಸಮನ್ವಯ' ಸಾಧಿಸುವ ಪ್ರಯತ್ನ ನಡೆಸಿದರು.

ಸನ್ಯಾಸತ್ವ ಬದುಕಿನ ಆರಂಭದಿಂದಲೂ ಪೇಜಾವರ ಶ್ರೀಗಳು ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಲು ಶ್ರಮಿಸಿದ್ದರು. ಅಸ್ಪೃಶ್ಯತೆಯಂತಹ ಭೇದ ಭಾವವನ್ನು ಅಳಿಸಲು ನಡೆಸಿದ ಕಾರ್ಯಕ್ರಮಗಳು, ಈಚೆಗೆ ಮುಸ್ಲಿಂ ಬಾಂಧವರಿಗೆ ಮಠದ ಆವರಣದಲ್ಲೇ ಈದ್ ಉಪಹಾರ ಕೂಟ ಮೊದಲಾದುವು ಸಮಾಜದಲ್ಲಿ ಸಾಮರಸ್ಯ ಮೂಡಿಸಲು ಅವರು ನಡೆಸಿದ ಮೇಲ್ಪಂಕ್ತಿಯ ಕೆಲಸಗಳು.

ಪೇಜಾವರ ಶ್ರೀಗಳಿಗೆ ದೆಹಲಿ ಸೇರಿದಂತೆ ದೇಶ ವಿದೇಶಗಳಲ್ಲಿ ಶಿಷ್ಯ ವರ್ಗ, ಭಕ್ತರು ಇದ್ದಾರೆ. ದೆಹಲಿಯ ವಸಂತಕುಂಜದಲ್ಲಿ ಪೇಜಾವರ ಮಠ ಮತ್ತು ಕೃಷ್ಣಧಾಮ ಮಂದಿರವಿದೆ. 2003ರಲ್ಲಿ ದೆಹಲಿ ಕರ್ನಾಟಕ ಸಂಘದ ನೂತನ ಸಾಂಸ್ಕೃತಿಕ ಸಮುಚ್ಚಯದ ಶಿಲಾನ್ಯಾಸ ಸಂದರ್ಭದಲ್ಲಿ ಶ್ರೀಗಳು ಉಪಸ್ಥಿತರಿದ್ದು ಆಶೀರ್ವಚನ ನೀಡಿದ್ದು ನಮ್ಮ ಸುಯೋಗ. ಇದೀಗ ಬೃಂದಾವನಸ್ಥರಾದ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿ ಅವರಿಗೆ ನಮ್ಮ ಶ್ರದ್ಧಾಪೂರ್ವಕ ನಮನಗಳು.



ಸಂಘದಲ್ಲಿ ಶ್ರೀ ಆದಿಚುಂಚನಗಿರಿ ಮಠದ ಶ್ರೀ ಬಾಲಗಂಗಾಧರ ಸ್ವಾಮೀಜಿ ಅವರೊಂದಿ ಪೇಜಾವರ ಶ್ರೀಗಳು (2003)

ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ ಶ್ರೀ ಎನ್.ಪಿ. ಭಟ್ ಅವರು ಈಚೆಗೆ ವಿಧಿವಶರಾಗಿದ್ದಾರೆ. ತೀರಾ ಈಚೆಗೆ ಸಂಘದ ಮುಖವಾಣಿ 'ಅಭಿಮತ'ವನ್ನು ಮೆಚ್ಚಿ ಸುದೀರ್ಘ ಪತ್ರ ಬರೆದಿದ್ದರು. ತಮ್ಮ ಕಾರ್ಯಾವಧಿಯಲ್ಲೇ 'ಅಭಿಮತ ಪತ್ರಿಕೆ'ಯನ್ನು ಹುಟ್ಟು ಹಾಕಿದ್ದ ಭಟ್ಟರು ಇಲ್ಲಿ ವಿಭಿನ್ನ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಆರಂಭಕ್ಕೆ ಕಾರಣರಾಗಿದ್ದರು. ಎನ್.ಪಿ. ಭಟ್ಟರು ಜೀವಿತದ ಕೊನೆಯವರೆಗೂ ಕ್ರಿಯಾಶೀಲರಾಗಿ ನಮಗೆ ಆದರ್ಶರಾಗಿದ್ದಾರೆ. ಹಿರಿಯ ಚೇತನ ಎನ್.ಪಿ. ಭಟ್ ಅವರಿಗೆ ನಮ್ಮ ಭಾವಪೂರ್ಣ ಶ್ರದ್ಧಾಂಜಲಿ.

ನಿಮಗೆಲ್ಲರಿಗೂ ಹೊಸ ವರ್ಷ 2020ರ ಹಾರ್ದಿಕ ಶುಭಾಶಯಗಳು.

*ಡಾ. ಅವನೀಂದ್ರನಾಥ್ ರಾವ್*

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 30 ಸಂಚಿಕೆ 4
ಜನವರಿ 2020, ಬೆಲೆ ರೂ. 1

ನಮ್ಮನಮ್ಮೊಳಗೆ

# ದೆಹಲಿ ಕಂಡ ಕನ್ನಡದ ದಿಗ್ಗಜ: ಶ್ರೀ ಎನ್ ಪಿ ಭಟ್ಟ

ದೆಹಲಿ ಕರ್ನಾಟಕ ಸಂಘದ 1990-92 ರ ಸಾಲಿನ ಅಧ್ಯಕ್ಷರಾಗಿದ್ದ ಶ್ರೀ ನಾರಾಯಣ ಪರಮೇಶ್ವರ ಭಟ್ಟರವರು (ದೆಹಲಿಯಲ್ಲಿ ಅವರು ಶ್ರೀ ಎನ್ ಪಿ ಭಟ್ಟರೆಂದೆ ಪರಿಚಿತರು) 29 ಡಿಸೆಂಬರ 2019 ರಂದು ಧಾರವಾಡದ ನಾರಾಯಣಪುರದಲ್ಲಿರುವ ತಮ್ಮ ಮನೆ 'ಅವನಿ'ಯಲ್ಲಿ ನಿಧನ ಹೊಂದಿದರು. ಅವರು ತಮ್ಮ ಧರ್ಮಪತ್ನಿ ಮತ್ತು ದೆಹಲಿ ವಿಶ್ವವಿದ್ಯಾಲಯದಲ್ಲಿ ಆಂಗ್ಲ ಭಾಷೆಯ ಪ್ರಾಧ್ಯಾಪಿಕೆಯಾಗಿ ನಿವೃತ್ತಿ ಹೊಂದಿದ ಡಾ. ಯಶೋಧಾ ಭಟ್ಟರವರನ್ನು ಮತ್ತು ತಮ್ಮ ಸೊಸೆ ಶ್ರೀಮತಿ ಸುಮಂಗಲಾ ಭಟ್ಟರವರನ್ನು ಅಗಲಿದ್ದಾರೆ. ಅವರ ಪುತ್ರ ದಿವಂಗತ ಡಾ. ಅವನೀಂದ್ರ ಭಟ್ಟ ದೆಹಲಿಯ ಜವಾಹರಲಾಲ ನೆಹರೂ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರದ ಪ್ರೊಫೆಸರರಾಗಿದ್ದರು. ತಮ್ಮ ಮಗನ ನೆನಪಿನಲ್ಲಿ ಅವರು ಮತ್ತು ಡಾ. ಯಶೋಧಾ ಭಟ್ಟರವರು ಜೊತೆಯಾಗಿ (ಮತ್ತು ಇತರ ಸಾಹಿತ್ಯದ ಸಹೃದಯಿಗಳ ಸಹಕಾರದೊಂದಿಗೆ) ಧಾರವಾಡದಿಂದ 'ಅವನಿ'ಯೆಂಬ ಕಿರುಪತ್ರಿಕೆಯನ್ನು ತರುವುದರ ಜೊತೆಗೆ 'ಅವನಿ ರಸಿಕರ ರಂಗ' ಎಂಬ ಸಾಹಿತ್ಯ ಕೂಟವನ್ನು ಹುಟ್ಟುಹಾಕಿ ಅದರ ಮೂಲಕ ಹಲವಾರು ಸಾಹಿತ್ಯ, ಸಂಗೀತ ಮತ್ತು ಸಾಮಾಜಿಕ ಕಾರ್ಯಕ್ರಮಗಳನ್ನು ನಿರಂತರವಾಗಿ ಆಯೋಜಿಸುತ್ತಿದ್ದರು. ಅವರು ಸುಮಾರು ನಾಲ್ಕು ದಶಕಗಳ ಕಾಲ ದಕ್ಷ ಆಡಳಿತಗಾರರಾಗಿ ಕೆಲಸ ಮಾಡಿದರೂ ಅವರ ಮೂಲಭೂತ ಆಸಕ್ತಿ ಸಾಹಿತ್ಯವಾಗಿತ್ತು. ಅವರ ಮೇಲೆ ಡಾ. ವಿ.ಕೃ. ಗೋಕಾಕ, ಡಾ. ರಂ. ಶ್ರೀ. ಮುಗಳಿ ಮತ್ತು ಹಲವಾರು ಸಾಹಿತ್ಯ ದಿಗ್ಗಜರ ಪ್ರಭಾವ ದಟ್ಟವಾಗಿ ಹರಡಿತ್ತು ಅವರ ಬಾಳಸಂಗಾತಿ ಡಾ. ಯಶೋಧಾ ಭಟ್ಟರವರು ಜ್ಞಾನಪೀಠ ಪ್ರಶಸ್ತಿ ವಿಜೇತ ಮತ್ತು ಕನ್ನಡದ ಮೇರು ಸಾಹಿತಿ ಡಾ. ವಿ.ಕೃ. ಗೋಕಾಕರ ಸುಪುತ್ರಿ. ಸಾಹಿತ್ಯ ಮತ್ತು ಸಂಗಾತಿ ಅವರಿಗೆ ಡಾ. ಗೋಕಾಕರಿಂದ ಬಂದ ಬಳುವಳಿಯೆಂದರೆ ಅತಿಶಯೋಕ್ತಿಯಾಗಲಾರದು. ತಮ್ಮ ಸುಮಾರು ಏಳು ದಶಕಗಳ ಸಾಹಿತ್ಯದ ಕೃಷಿಯಲ್ಲಿ ಅವರು ಹಲವಾರು ಕನ್ನಡ ಕೃತಿಗಳನ್ನು ರಚಿಸಿದರು. ಅವರ 'ಅಲ್ಲಿಯ ಮತ್ತು ಇಲ್ಲಿಯ ಕತೆಗಳು' ಕಥಾಸಂಕಲನ ನನ್ನ ಮೇಲೆ ತುಂಬಾ ಪ್ರಭಾವ ಬೀರಿದ್ದನ್ನು ಇಲ್ಲಿ ನೆನೆಸಿಕೊಳ್ಳುತ್ತೇನೆ. ಅವರ ಇತರ ಪ್ರಮುಖ ಕೃತಿಗಳನ್ನು ಇಲ್ಲಿ ನೆನೆಸಿಕೊಳ್ಳಬೇಕು. ಅವೆಂದರೆ 'ದಕ್ಷಿಣ ಧ್ರುವ ನಕ್ಷಾಗ (ಕಥಾಸಂಕಲನ), ಹೆಮ್ಮರಗಳು ತಲೆ ಎತ್ತಿವೆ (ಕಾವ್ಯ), ಕುಬೇರ ರಾಜ್ಯದ ಚಿತ್ರ-ವಿಚಿತ್ರ (ಅಮೇರಿಕೆಯ ಪ್ರವಾಸ ಕಥನ), ನೆನೆಪಿನ ಉಯ್ಯಾಲೆ (ಆತ್ಮಕಥನ), ಮನದಾಳದ ಮುತ್ತು ರತ್ನಗಳು (ವ್ಯಕ್ತಿ ಚಿತ್ರಗಳು). ತಮ್ಮ ಕೃತಿಗಳಲ್ಲಿ ಮತ್ತು ಬರಹಗಳಲ್ಲಿ ಅವರು 'ರಂಜನ' ಮತ್ತು 'ನಾರಂಗಿ' ಭಟ್ಟ ಎಂಬ ಕಾವ್ಯನಾಮಗಳನ್ನು ಉಪಯೋಗಿಸುತ್ತಿದ್ದರು. ಕನ್ನಡ, ಹಿಂದಿ ಮತ್ತು ಇಂಗ್ಲಿಷ ಭಾಷೆಗಳಲ್ಲಿ ಶ್ರೀ ಭಟ್ಟರು ಪರಿಣಿತರಾಗಿದ್ದರು. ಉತ್ತರ ಕನ್ನಡ ಜಿಲ್ಲೆಯ ಕರಾವಳಿಯ ಪುಟ್ಟ ಊರಾದ ಶಿರಾಲಿಯಲ್ಲಿ 1933 ರಲ್ಲಿ ಜನಿಸಿದ ಶ್ರೀ ಭಟ್ಟರು ಪುಣೆ, ಕೊಲ್ಲಾಪುರ ಮತ್ತು ಅಮೇರಿಕೆಯ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯಗಳಲ್ಲಿ ತಮ್ಮ ಶಿಕ್ಷಣದ ಭಾಗಗಳನ್ನು ಮುಗಿಸಿದ್ದರು. 1955 ರಲ್ಲಿ ಭಾರತದ ರೆವಿನ್ಯೂ ಆಡಳಿತ ಸೇವೆಯನ್ನು ಯು.ಪಿ.ಎಸ್.ಸಿ. ಯ ಮೂಲಕ ಸೇರಿದ ಅವರು ದೇಶದ ಹಲವಾರು ಭಾಗಗಳಲ್ಲಿ ನುರಿತ ಮತ್ತು ದಕ್ಷ ಆಡಳಿತಗಾರರಾಗಿ ಕೆಲಸ ಮಾಡಿ 1992 ರಲ್ಲಿ ತಮ್ಮ ಸೇವಾ ನಿವೃತ್ತಿ ಪಡೆದರು. ತಮ್ಮ ಸೇವೆಯ ಕಾಲದಲ್ಲಿ 1979 ರಿಂದ ಅವರು ದೆಹಲಿಯಲ್ಲಿದ್ದರು.

ಅವರು ರೆವಿನ್ಯೂ ವಿಭಾಗದಲ್ಲಿ ಮುಖ್ಯ ಆಯುಕ್ತರಾಗಿ ದೆಹಲಿ, ಗುಜರಾತ ಮತ್ತು ಹಲವಾರು ರಾಜ್ಯಗಳನ್ನು ನೋಡಿಕೊಳ್ಳುವ ದೊಡ್ಡ ಹುದ್ದೆಯಲ್ಲಿದ್ದರೂ ಯಾವುದೆ ಬಗೆಯ ದೊಡ್ಡತನ ಅವರ ವ್ಯಕ್ತಿತ್ವದಲ್ಲಿ ಎಂದೂ ಕಾಣುತ್ತಿರಲಿಲ್ಲ. ಒಂದು ಬಗೆಯ ಮುಗ್ಧತೆ ಮತ್ತು ಮಗುವಿನಂತಹ ಮನಸ್ಸು ಅವರ ವ್ಯಕ್ತಿತ್ವದ ಭಾಗವಾಗಿತ್ತು. ಸರಕಾರದ ರೆವೆನ್ಯೂ ವಿಭಾಗದ ಎಲ್ಲ ಬಗೆಯ ಕಾನೂನು ಕಟ್ಟಲೆಗಳ ಸಂಕೀರ್ಣತೆಗಳ ನಡುವೆಯೂ ಅವರ ಸಾಹಿತ್ಯ ಪ್ರೇಮ ಸದಾ ಜಾಗೃತವಾಗಿರುತ್ತಿತ್ತು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಕಾಲದಲ್ಲಿ ತಮ್ಮ ಕೇಂದ್ರ ಸರಕಾರದ ಉನ್ನತ ಹುದ್ದೆಯಿಂದ ಅವರು ಇನ್ನೂ ನಿವೃತ್ತಿ ಹೊಂದಿರಲಿಲ್ಲ. ತಮ್ಮ ನಿವೃತ್ತಿಯ ಬಾಗಿಲಲ್ಲಿದ್ದರು ಎಂದರೆ ಸರಿಯಾದಿತೇನೋ. ಇಂತಹ ಒಳ್ಳೆಯ ಅಧಿಕಾರಿಯನ್ನು ಬಿಡಲು ಯಾವ ಸರಕಾರಕ್ಕೆ ತಾನೆ ಮನಸು ಬಂದಿತು? ಅವರ ದೆಹಲಿ ಕರ್ನಾಟಕ ಸಂಘದ ಕನಸಿನ ಕೂಸಾದ 'ಅಭಿಮತ'ದ ಸಂಪಾದಕನಾಗಿ ಅವರೊಂದಿಗೆ ಕೆಲಸ ಮಾಡುವ ಸೌಭಾಗ್ಯ ನನ್ನದಾಗಿತ್ತು. ಜೆ.ಎನ್.ಯು. ನಲ್ಲಿ ಓದುತ್ತ ದೆಹಲಿಯ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ನಾನು ಕೆಲಸ ಮಾಡುತ್ತಿದ್ದನ್ನು ಅವರು ಗಮನಿಸಿದ್ದರು. ಮತ್ತು ನನ್ನ ತೀವ್ರವಾದ ಸಾಹಿತ್ಯಾಸಕ್ತಿಯೂ ಅವರ ಭಾವನೆಗಳಿಗೆ ಹೊಂದುವಂತಿತ್ತು. ಅವರು ಉತ್ತರ ಕನ್ನಡದ ಕರಾವಳಿಯನ್ನು ಬಿಟ್ಟು ಯಾವುದೋ ಮೋಹನ ಮುರಳಿಯ ಕರೆಯುವಿಕೆಗೆ ಓ ಗೊಡುವುಂತೆ ಜಗತ್ತಿನತ್ತ ಮುಖಮಾಡಿ ಹೊರಟು ಐದಾರು ದಶಕಗಳು ಕಳೆದಿದ್ದರೂ, ನನ್ನಂತವನು ಊರಿನಿಂದ ಇನ್ನೊಂದು ಮುರಳಿಯ ಗಾನದ ಕರೆಗೆ ಓ ಗುಟ್ಟುತ್ತ ಹೊರಟದ್ದು ಒಂದೆರಡು ದಶಕಗಳನ್ನು ಮೀರಿರಲಿಲ್ಲ. ಖಾನ್ ಮಾರ್ಕೆಟನ ಬಳಿಯಿದ್ದ ಲೋಕನಾಯಕ ಭವನದ ಐದೊ ಆರನೆಯ ಮಹಡಿಯ ಅವರ ವಿಸ್ತೃತವಾದ ಕಛೇರಿಯಲ್ಲಿ ನಾನು ಮೂಲೆಯಲ್ಲಿ ಕುಳಿತು ಅಭಿಮತದ ಲೇಖನಗಳನ್ನು ಬರೆಯುವ ಮತ್ತು ಪರಿಷ್ಕರಿಸುವ ಕೆಲಸವನ್ನು ಮಾಡಿದ್ದೇನೆ. ದೇವನಗರದ (ಕರೋಲ ಭಾಗನ ಬಳಿ) ಸರಕಾರಿ ಮನೆಯಲ್ಲಿ ನಾವೆಲ್ಲ ಸೇರಿ ಅಭಿಮತವನ್ನು ಸಂಪಾದಿಸುವ ಕೆಲಸದ ಜೊತೆಗೆ ಹಲವಾರು ಸಾಹಿತ್ಯಿಕ ಸಂವಾದಗಳಲ್ಲಿ ಭಾಗಿಯಾಗಿದ್ದೇವೆ. ಕನ್ನಡ ಸಾಹಿತ್ಯ ಪ್ರೇಮಿಗಳಿಗೆ ಅವರ ಮನ, ಮನೆ ಮತ್ತು ಮಾಧುರ್ಯ ಸದಾ ತೆರೆದ ಬಾಗಿಲಾಗಿತ್ತು. ಅವರೊಂದಿಗೆ ಯಶೋಧಮ್ಮನವರು ಸಹ ಸಹಭಾಗಿ. ಅವರು ನೀಡಿದ ಪ್ರೀತಿ, ವಾತ್ಸಲ್ಯಗಳನ್ನು ನಾನು ಹೃದಯಪೂರ್ವಕವಾಗಿ ನೆನೆಸಿಕೊಳ್ಳುತ್ತೇನೆ.

ಈಗ ನೆನೆಸಿಕೊಂಡರೆ ಆಗಿನ ಅಭಿಮತದ ದಿನಗಳು ಸುಲಭವಾಗಿರಲಿಲ್ಲ. ಕನ್ನಡ ಅಚ್ಚುಕೂಟದ ತಾಂತ್ರಿಕ ಸಲಕರಣೆಗಳು ದೆಹಲಿಯಲ್ಲಿ ಒಂದೆರಡು ಜಾಗೆಗಳಲ್ಲಿ ಮಾತ್ರ ಲಭ್ಯವಿದ್ದವು. ಆಗ ದೆಹಲಿಯಿಂದ ಕನ್ನಡದಲ್ಲಿ ಹೊರಬರುತ್ತಿದ್ದ 'ಸೈನಿಕ ಸಮಾಚಾರ' (ಡಿ.ಸಿ.ಎಸ್. ರಾವ್ ರವರ ಕೆಳಗೆ) ಮತ್ತು 'ಯೋಜನಾ' (ಸೇತುರಾವ್ ರವರ ಕೆಳಗೆ) ಪತ್ರಿಕೆಗಳ ಕನ್ನಡ ಸಂಪಾದಕರ ಸಹಾಯ ಪಡೆದು 'ಅಭಿಮತ' ವನ್ನು ಅಚ್ಚು ಹಾಕಿಸಲು ಕರೋಲ ಭಾಗನಲ್ಲೆ ಇದ್ದ ಒಂದೇ ಒಂದು ಪ್ರಿಂಟಿಗ್ ಪ್ರೆಸ್ಸಿಗೆ ಹಲವಾರು ಬಾರಿ ಎಡತಾಕಬೇಕಾಗಿತ್ತು. ಅಲ್ಲಿದ್ದ ಏಕಮೇವಾದ್ವಿತೀಯ ನಮ್ಮ ತಮಿಳಿನ ಪ್ರಿಟಿಂಗ್ ಪಟು ದಕ್ಷಿಣ ಭಾರತದ ಎಲ್ಲ ಭಾಷೆಗಳಿಗೂ ಅಚ್ಚುಕೂಟದಲ್ಲಿ ಮೊಳೆ ಜೋಡಿಸುತ್ತಿದ್ದ. ಆ ಜೋಡಿಸುವ ವೇಳೆಯಲ್ಲಿ ಒತ್ತಕ್ಷರಗಳನ್ನು ಜೋಡಿಸುವಾಗ ಆಗುತ್ತಿದ್ದ ಅವಾಂತರಗಳಿಗೆ ಕಡಿವಾಣ ಹಾಕಲು ನಾವು ಕಣ್ಣಿಗೆ ಎಣ್ಣೆ ಹಾಕಿಕೊಂಡು ಪ್ರತಿಗಳನ್ನು ತಿದ್ದಬೇಕಾಗುತ್ತಿತ್ತು. ನಂತರದಲ್ಲಿ ಆಗಿನ ಸಂಘದ ಕಾರ್ಯದರ್ಶಿಗಳಾಗಿದ್ದ ಶ್ರೀಯುತ ಗೋಪಿನಾಥರವರ ಸಹಾಯದಿಂದ ನಾವು ನಿಧಾನವಾಗಿ ಕಂಪ್ಯೂಟರೀಕರಣದತ್ತ ನಡೆದವು. ಈ ಕುರಿತಾಗಿ 'ಅಭಿಮತ'ದಲ್ಲೇ ವಿಸ್ತ್ರತವಾಗಿ ನಾನು ಬರೆದಿದ್ದೇನೆ.

ನಂತರದಲ್ಲಿ ಶ್ರೀ ಭಟ್ಟರು ದೆಹಲಿ ಕರ್ನಾಟಕ ಸಂಘದಿಂದ ನಿರ್ಗಮಿಸಿ 1997 ರ ಹೊತ್ತಿಗೆ ಧಾರವಾಡಕ್ಕೆ ಬಂದು ನೆಲೆಸಿದರು. ಇದರಿಂದ ಧಾರವಾಡ-ಹುಬ್ಬಳ್ಳಿಗೆ ಆದ ಲಾಭಗಳೆ ಹೆಚ್ಚು. ಅಲ್ಲೂ ಅವರು ತಮ್ಮ ಪಾದರಸದಂತಹ ಚಟುವಟಿಕೆಗಳನ್ನು ಸಾಹಿತ್ಯದಿಂದ, ಗ್ರಾಹಕ ನ್ಯಾಯದ ಕುರಿತಾಗಿ, ಇನ್ ಟ್ಯಾಕ್ ಜೊತೆಗೆ, ತಮ್ಮದೆ ಪ್ರಕಾಶನದ ಜೊತೆಗೆ, ಧಾರವಾಡದ ಮತ್ತು ಅಲ್ಲಿನ ಘನ ವ್ಯಕ್ತಿವಿಶಿಷ್ಟಗಳ ಕುರಿತಾಗಿ ವಸ್ತು ಸಂಗ್ರಹಾಲಯವನ್ನು ಪ್ರಾರಂಭಿಸುವುದರ ಮೂಲಕ...ತಮ್ಮ ಛಾಪನ್ನು ಮೂಡಿಸಿದರು. ಗೋಕಾಕ ಟ್ರಸ್ಟ್‌ನ ಸಂಸ್ಥಾಪಕ ಸದಸ್ಯರಾಗಿ ಅವರು ಮಾಡಿದ ಕೆಲಸವನ್ನು ಇಲ್ಲಿ ನೆನೆಯಬೇಕು. ಈ ಎಲ್ಲ ನೆನಪುಗಳ ಮಾಲೆಯನ್ನು ನಮ್ಮೊಂದಿಗೆ ಬಿಟ್ಟು ಶ್ರೀ ಭಟ್ಟರು ಈ ಜಗತ್ತಿಗೆ ತಮ್ಮ ಕೊನೆಯ ವಿದಾಯ ಹೇಳಿದ್ದಾರೆ. ಅವರು ಹಾಕಿಕೊಟ್ಟ ಹಾದಿಯಲ್ಲಿ ನಾವೆಲ್ಲ ನಡೆದು, ಅವರ ನಿಸ್ಪೃಹತೆ ಮತ್ತು ಮಗುವಿನಂತಹ ಮುಗ್ಧತೆಯನ್ನು ನಮ್ಮೊಂದಿಗೆ ಇರಿಸಿಕೊಳ್ಳುವುದೆ ನಾವು ಅವರಿಗೆ ನೀಡಬಹುದಾದ ಪ್ರೀತಿಯ ಶ್ರದ್ಧಾಂಜಲಿ. ಕೊನೆಯ ಮಾತು-ಅವರ ನೆನಪಿನಲ್ಲಿ 'ಅಭಿಮತ' ಮತ್ತು ದೆಹಲಿ ಕರ್ನಾಟಕ ಸಂಘ ಜಂಟಿಯಾಗಿ ಪ್ರತಿವರ್ಷ ಕನ್ನಡದ ಉತ್ತಮ ಪತ್ರಿಕಾ ವರದಿಗೆ (ಅಥವಾ ಮೀಡಿಯಾ) ಪ್ರಶಸ್ತಿಯನ್ನು ನೀಡುವುದರ ಬಗ್ಗೆ ವಿಚಾರ ಮಾಡಬೇಕು.

*ಡಾ. ವೆಂಕಟಾಚಲ ಹೆಗಡೆ*
*ಅಧ್ಯಕ್ಷರು*

# ಆತ್ಮೀಯ ಕನ್ನಡ ಬಂಧುಗಳಿಗೆ ಹೊಸ ವರ್ಷ ಮತ್ತು ಸಂಕ್ರಾಂತಿ ಹಬ್ಬದ ಶುಭಾಶಯಗಳು

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗೆ ನಡೆದ ಚುನಾವಣೆಯಲ್ಲಿ ತಾವು ನೂತನ ಕಾರ್ಯಕಾರಿ ಸಮಿತಿಯನ್ನು ಆರಿಸಿದ್ದೀರಿ. ನಿಮ್ಮೆಲ್ಲರ ಸಹಕಾರದೊಂದಿಗೆ ಈ ನಮ್ಮ ಒಂದು ವಿದ್ಯಾ ಸಂಸ್ಥೆಯನ್ನು ಒಂದು ಮಾದರಿ ಶಾಲೆಯನ್ನಾಗಿ ಮಾಡೋಣ. ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅಧ್ಯಕ್ಷರಾಗಿ ಡಾ ಎಂ.ಎಸ್. ಶಶಿಕುಮಾರ್ ಕಾರ್ಯದರ್ಶಿಗಳಾಗಿ ಎನ್.ಪಿ. ಚಂದ್ರಶೇಖರ್ ಉಪಾಧ್ಯಕ್ಷರಾಗಿ ಟಿ.ಪಿ ಬೆಳ್ಳಿಯಪ್ಪ ಕೋಶಾಧ್ಯಕ್ಷರಾಗಿ ಹಾಗೂ ಚುನಾಯಿತರಾದ ಎಲ್ಲಾ ಪದಾಧಿಕಾರಿಗಳು ಮತ್ತು ಸದಸ್ಯರಿಗೆ ಶುಭಾಶಯಗಳು.

ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಗಳ ಜೊತೆಗೆ ಈ ಬಾರಿಯ ಆಟೋಟ ಸ್ಪರ್ಧೆಗಳಲ್ಲಿ ಅದರಲ್ಲೂ ಕ್ರಿಕೆಟ್ ಪಂದ್ಯಾವಳಿ ಜನವರಿ 12 ಮತ್ತು 19ರ ಭಾನುವಾರದಂದು ತಾಲ್ಕತೋರ ಮೈದಾನದಲ್ಲಿ ನಡೆಯಲಿದೆ. ಈ ಪಂದ್ಯಾವಳಿಯಲ್ಲಿ ದೆಹಲಿಯ ಹತ್ತು ಕನ್ನಡಿಗರ ತಂಡಗಳು ಭಾಗವಹಿಸುತ್ತಿವೆ. ತಪ್ಪದೇ ಈ ಕ್ರಿಕೆಟ್ ಆಟೋಟಗಳಲ್ಲಿ ನಮ್ಮ ಎಲ್ಲಾ ಕನ್ನಡಿಗರು ಭಾಗವಹಿಸಿ. ಜನವರಿ 12ರಂದು ಆಯೋಜಿಸಲಾಗಿರುವ ವಿಜಯ ಕಲಾ ನಾಟ್ಯ ಸಂಘ, ಇಲಕಲ್ಲ ಕಲಾವಿದರು ಪ್ರಸ್ತುತಪಡಿಸುವ 'ಸಂಪತ್ತಿಗೆ ಸವಾಲ್' ನಾಟಕ ಪ್ರದರ್ಶನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ. ಏಕಾಂಕ ನಾಟಕ ಸ್ಪರ್ಧೆಯನ್ನು ಮುಂದೂಡಲಾಗಿದೆ.

ದೆಹಲಿ ಕರ್ನಾಟಕ ಸಂಘದ ಜೊತೆಗೂಡಿ ದೆಹಲಿ ಒಕ್ಕಲಿಗರ ಸಂಘ ಜನವರಿ 19ರಂದು ಹಮ್ಮಿಕೊಂಡಿರುವ ಸಂಕ್ರಾಂತಿ ಮಿಲನ ಕಾರ್ಯಕ್ರಮದಲ್ಲಿ ಅನೇಕ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಕನ್ನಡದ ಕಲರ್ಸ್ ಸೂಪರ್ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಜನಪ್ರಿಯ ಕಾರ್ಯಕ್ರಮ "ಕನ್ನಡದ ಕೋಗಿಲೆಗಳು" ಸೀಸನ್ –2 ರಲ್ಲಿನ ಸ್ಪರ್ಧಿ ಶ್ರೀಮತಿ ಸವಿತಾ ಗಣೇಶ್ ಪ್ರಸಾದ್ ತಂಡದಿಂದ ಮತ್ತು ಸುವರ್ಣ ಸ್ಟಾರ್ ಸಿಂಗರ್‌ನ ಉಪವಿಜೇತ ಶ್ರೀ ರಾಜೀವ್ ಅಗಳಿ ತಂಡ ಇವರಿಂದ "ಜಾನಪದ, ಭಾವಗೀತೆ ಮತ್ತು ರಂಗಗೀತೆಗಳು" ಹಾಗೂ ದೆಹಲಿ ಒಕ್ಕಲಿಗ ಗೌಡ ಸಂಘದ ಸದಸ್ಯರಿಂದ ಸಮೂಹ ಗಾಯನ ಮತ್ತು ನೃತ್ಯ ನಡೆಯಲಿವೆ. ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ.

*ಸಿ.ಎಂ. ನಾಗರಾಜ*
*ಪ್ರಧಾನ ಕಾರ್ಯದರ್ಶಿ*

## ದೆಹಲಿ ಕರ್ನಾಟಕ ಸಂಘದಲ್ಲಿ ತಿಂಗಳ ಕಾರ್ಯಕ್ರಮ

**ಜನವರಿ 19, 2020 ಭಾನುವಾರ ಸಂಜೆ : 4.30 ಗಂಟೆಯಿಂದ**

**ದೆಹಲಿ ಕರ್ನಾಟಕ ಸಂಘ ಹಾಗೂ ದೆಹಲಿ ಒಕ್ಕಲಿಗ ಗೌಡ ಸಂಘ,**

ಸಹಯೋಗದೊಂದಿಗೆ

ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಸ್ವಾಮೀಜಿಗಳ ದಿವ್ಯ ಆಶಿರ್ವಾದಗಳೊಂದಿಗೆ
ಶ್ರೀ ಆನಂದ ಚೈತನ್ಯನಾಥ ಸ್ವಾಮೀಜಿ ಇವರ ದಿವ್ಯ ಸಾನಿಧ್ಯದಲ್ಲಿ

**"ಸಂಕ್ರಾಂತಿ ಮಿಲನ"**

ವಿದ್ಯಾರ್ಥಿ ವೇತನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು

**"ಜಾನಪದ, ಭಾವಗೀತೆ ಮತ್ತು ರಂಗಗೀತೆಗಳು"**

ಶ್ರೀಮತಿ ಸವಿತಾ ಗಣೇಶ್ ಪ್ರಸಾದ್ ಮತ್ತು ತಂಡ
ಖ್ಯಾತ ಗಾಯಕಿ, ಬೆಂಗಳೂರು (ಕನ್ನಡದ ಕಲರ್ಸ್ ಸೂಪರ್ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಜನಪ್ರಿಯ ಕಾರ್ಯಕ್ರಮ
**"ಕನ್ನಡದ ಕೋಗಿಲೆಗಳು"** ಸೀಸನ್ –2ರಲ್ಲಿನ ಸ್ಪರ್ಧಿ)

ಹಾಗೂ

ಶ್ರೀ ರಾಜೀವ್ ಅಗಳಿ ಮತ್ತು ತಂಡ ಬೆಂಗಳೂರು,
ಸುವರ್ಣ ಸ್ಟಾರ್ ಸಿಂಗರ್‌ನ ಉಪವಿಜೇತ ಇವರಿಂದ

**ಸಮೂಹ ಗಾಯನ ಮತ್ತು ನೃತ್ಯ**

ಡಿ.ವಿ.ಜಿ.ಎಸ್ ಸದಸ್ಯರು ಮತ್ತು ಸ್ಥಳೀಯ ಕಲಾವಿದರಿಂದ

## ಏಕಾಂಕ ನಾಟಕ ಸ್ಪರ್ಧೆ-2019



**ಜನವರಿ 10, 11 ಮತ್ತು 12, 2020 ರಂದು ಆಯೋಜಿಸಿದ್ದ ಏಕಾಂಕ ನಾಟಕ ಸ್ಪರ್ಧೆಯನ್ನು ಫೆಬ್ರವರಿ 1 ಮತ್ತು 2ಕ್ಕೆ ಮುಂದೂಡಲಾಗಿದೆ. ಈ ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವವರು ತಮ್ಮ ತಂಡದ ಹೆಸರನ್ನು ನೊಂದಾಯಿಸಲು ಅವಕಾಶವಿದೆ. ತಮ್ಮ ತಂಡದ ಹೆಸರನ್ನು ಸಂಪೂರ್ಣ ಮಾಹಿತಿಯೊಂದಿಗೆ ಸಂಘದ ಕಚೇರಿಯಲ್ಲಿ ಸಲ್ಲಿಸಬಹುದು.**

*ಪ್ರಧಾನ ಕಾರ್ಯದರ್ಶಿ*

# ಭಿವಾಡಿಯಲ್ಲಿ ಕನ್ನಡ ರಾಜ್ಯೋತ್ಸವ




ದಿನಾಂಕ 7-12-2019ರಂದು ಭಿವಾಡಿ ಕನ್ನಡ ಸಂಘ ಕರ್ನಾಟಕ ರಾಜ್ಯೋತ್ಸವವನ್ನು ದೆಹಲಿ ಕರ್ನಾಟಕ ಸಂಘದ ಸಹಯೋಗದೊಂದಿಗೆ ಅತ್ಯಂತ ಸಂಭ್ರಮದಿಂದ ವರ್ಣರಂಜಿತವಾಗಿ ಆಚರಿಸಿತು. ಭಿವಾಡಿಯ ಭವ್ಯವಾದ ಸಮುದಾಯ ಭವನದ ಸಭಾಂಗಣದಲ್ಲಿ ಸಾದರಗೊಂಡ 64ನೇ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ದೆಹಲಿ ಮತ್ತು ಗುರುಗ್ರಾಮದ ಕನ್ನಡಿಗರು ಆಗಮಿಸಿದ್ದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ, ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ, ಗುರುಗ್ರಾಮ ಕನ್ನಡ ಸಂಘದ ಕಾರ್ಯದರ್ಶಿ ಕೃಷ್ಣಪ್ಪ, ಉಪಾಧ್ಯಕ್ಷ ಸಾಬು ದರ್ಗಾ, ಭಿವಾಡಿ ಕನ್ನಡ ಸಂಘದ ಅಧ್ಯಕ್ಷ ಪ್ರಭು ಪಾಟೀಲ, ಪ್ರಧಾನ ಕಾರ್ಯದರ್ಶಿ ಈಶ್ವರಲಿಂಗ ಅರೇರ ಮತ್ತು ಮುಖ್ಯ ಅತಿಥಿ ಡಾ. ಎಸ್. ಎನ್. ಶ್ರೀಧರ್ ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಭಿವಾಡಿ ಕನ್ನಡ ಸಂಘದ ಜಂಟಿ ಖಜಾಂಚಿ ಜೆ.ಎಚ್. ನವೀನ್ ಮತ್ತು ಉಪಾಧ್ಯಕ್ಷೆ ಶ್ರೀಮತಿ ವೀಣಾ ದೇಸಾಯಿಯವರ ನಿರೂಪಣೆ ಗಮನ ಸೆಳೆಯಿತು. ಮುಖ್ಯ ಅತಿಥಿ ಗುರುಗ್ರಾಮ ಅಮಿಟಿ ವಿಶ್ವವಿದ್ಯಾಲಯದ ನಿರ್ದೇಶಕ ಡಾ. ಎಸ್.ಎನ್. ಶ್ರೀಧರ್ ಅವರು ಇಂಜಿನಿಯರಿಂಗ್ ತಜ್ಞರಾಗಿದ್ದರೂ ಕನ್ನಡ ಪ್ರೇಮಿಯಾಗಿ ತಮ್ಮ ಭಾಷಣದಲ್ಲಿ ಕರ್ನಾಟಕದ ಹಿರಿಮೆ-ಗರಿಮೆ, ಇತಿಹಾಸ, ಪ್ರಾಚೀನ ಕನ್ನಡ ಶಾಸನಗಳ ಬಗ್ಗೆ ವಿವರಿಸಿದರು. ತಮ್ಮ 'ವಚನ ಸಂಪುಟ'ದಿಂದ ಆಯ್ದ ಕೆಲ ವಚನಗಳನ್ನು ವಾಚಿಸಿದ್ದು ವಿಶೇಷವಾಗಿತ್ತು. ಡಾ. ವೆಂಕಟಾಚಲ ಹೆಗಡೆ ಮತ್ತು ಸಿ.ಎಂ. ನಾಗರಾಜ ಅವರು ಮಾತನಾಡಿ ಭಿವಾಡಿ ಕನ್ನಡ ಸಂಘದ ಚಟುವಟಿಕೆಗಳಿಗೆ ಸದಾ ದೆಹಲಿ ಕರ್ನಾಟಕ ಸಂಘದ ಸಹಕಾರ ಇರುವುದಾಗಿ ಹೇಳಿದರು. ಭಿವಾಡಿ ಕನ್ನಡ ಸಂಘದ ಉಪಾಧ್ಯಕ್ಷ ಗೋಪಾಲ ಕೃಷ್ಣ ಭಟ್ ಅವರು ಗಣ್ಯರಿಗೆ ನೆನಪಿನ ಕಾಣಿಕೆ ನೀಡಿ, ವಂದಿಸಿದರು.

ಭಿವಾಡಿ ಕನ್ನಡಿಗರ ಹಾಡುಗಳು, ಪುಟಾಣಿಗಳ ನಯನ ಮನೋಹರ ನೃತ್ಯ ಎಲ್ಲರ ಮನಸೂರೆಗೊಳಿಸಿದವು. ಜೆ.ಎಚ್. ನವೀನ್ ರವರು ಭಿವಾಡಿ ಕಲಿಕಾ ಕೇಂದ್ರದ ಪುಟಾಣಿ ಮಕ್ಕಳಿಗೆ ಕನ್ನಡ ವರ್ಣಮಾಲೆಯನ್ನು ಬಣ್ಣಿಸುವ 'ಅ ಆ ಇ ಈ ಕನ್ನಡದ ಅಕ್ಷರ ಮಾಲೆ' ಎನ್ನುವ ಜನಪ್ರಿಯ ಸಿನಿಮಾ ಹಾಡನ್ನು ಕಲಿಸಿಕೊಟ್ಟು, ಮಕ್ಕಳೊಂದಿಗೆ ತಾವೂ ಸೇರಿ ಸೊಗಸಾಗಿ ಹಾಡಿ ಕಾರ್ಯಕ್ರಮಕ್ಕೆ ಮತ್ತಷ್ಟು ಮೆರುಗು ನೀಡಿದ್ದರು. ಕರ್ನಾಟಕದಿಂದ ಆಗಮಿಸಿದ್ದ ಜಾನಪದ ಕಲಾ ತಂಡದವರಿಂದ ನಡೆದ ವೀರಗಾಸೆ, ಪೂಜಾ ಕುಣಿತ ಹಾಗೂ ಡೊಳ್ಳು ಕುಣಿತದ ಗಂಡು ಕಲೆಗಳು ವಿಶಿಷ್ಟ ಅನುಭವ ನೀಡಿತ್ತು. ಕರ್ನಾಟಕದಿಂದ ಜಾನಪದ ಕಲಾತಂಡವನ್ನು ಕರೆಸಿ ಕಾರ್ಯಕ್ರಮ ಕೊಡಿಸುವಲ್ಲಿ ಶ್ರಮಿಸಿದ ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳನ್ನು ಇಲ್ಲಿ ಸ್ಮರಿಸಲೇಬೇಕು.

ಕಾರ್ಯಕ್ರಮ ಯಶಸ್ಸಿಗೆ ಶ್ರಮಿಸಿದ ಸಂಘದ ಜಂಟಿ ಕಾರ್ಯದರ್ಶಿ ಸುಧಾಕರ ಶೆಟ್ಟಿ, ಖಜಾಂಚಿ ಜಿ.ಎಚ್. ರವಿ ಹಾಗೂ ಸದಸ್ಯರಾದ ಮಹೇಶ್ ಶೆಟ್ಟಿ, ಎಸ್. ಪೂರ್ಣಚಂದ್ರ, ವಿ.ವಿ. ಮಿರ್ಜಿ ಹಾಗೂ ಕಾರ್ಯಕರ್ತರ ಪರಿಶ್ರಮ ಶ್ಲಾಘನೀಯ. ಖಾಲಿ ಭವನದಲ್ಲಿ ಕುರ್ಚಿಗಳನ್ನು ಒಪ್ಪವಾಗಿ ಜೋಡಿಸಿಟ್ಟು, ವೇದಿಕೆಯನ್ನು ಕೆಂಪು-ಹಳದಿ ಬಣ್ಣದ ಬಲೂನುಗಳಿಂದ ಅಲಂಕರಿಸಿ ವೇದಿಕೆಯನ್ನು ಕನ್ನಡಮಯವಾಗಿಸಿದ್ದು ಅರ್ಥಪೂರ್ಣವಾಗಿ ಶೋಭೆಯನ್ನೂ ತಂದಿತ್ತು. ವೇದಿಕೆಯ ಮುಂಭಾಗದಲ್ಲಿ ತಾಯಿ ಭುವನೇಶ್ವರಿ ದೇವಿಯ ಸುಂದರ ಚಿತ್ರ ಕಂಗೊಳಿಸುತ್ತಿತ್ತು.

ಗುರುಗ್ರಾಮದಿಂದ ಆಗಮಿಸಿದ ಕನ್ನಡಿಗರು ಕಾರ್ಯಕ್ರಮ ಇನ್ನಷ್ಟು ಕಳೆಗಟ್ಟುವಂತೆ ಮಾಡಿದರು. ಈ ರೀತಿ ಭಿವಾಡಿಯಲ್ಲಿ ಕನ್ನಡಿಗರೆಲ್ಲಾ ಸೇರಿ ಒಂದು ಮಿನಿ ಕರ್ನಾಟಕವನ್ನೇ ಸೃಷ್ಟಿಸಿದಂತೆ ಭಾಸವಾಗಿತ್ತು.



*ರತ್ನಶ್ರೀ ಶ್ರೀಧರ್*

# ಉನ್ನತ ಪ್ರಶಸ್ತಿ ವಿಜೇತ ಸಿನಿಮಾ ಕಲಾವಿದರಿಗೆ ಅಭಿನಂದನೆ



ಈ ಬಾರಿ ಕನ್ನಡದ 'ಒಂದಲ್ಲ ಎರಡಲ್ಲ' ಚಲನಚಿತ್ರ ರಾಷ್ಟ್ರೀಯ ಭಾವೈಕ್ಯತೆಗಾಗಿ ನೀಡುವ ನರ್ಗೀಸ್ ದತ್ ಸ್ಮಾರಕ ಅತ್ಯುತ್ತಮ ಚಲನಚಿತ್ರ ಪ್ರಶಸ್ತಿ ಪಡೆಯಿತು. ಈ ಚಿತ್ರದ ಪ್ರಮುಖ ಪಾತ್ರದಲ್ಲಿ ಅಭಿನಯಿಸಿರುವ ರೋಹಿತ್ 'ಅತ್ಯುತ್ತಮ ಬಾಲನಟ' ಪ್ರಶಸ್ತಿಗೆ ಭಾಜನರಾದರು. 'ಮಹಾನ್ ಹುತಾತ್ಮ' ಕನ್ನಡ ಕಿರುಚಿತ್ರದ ನಿರ್ದೇಶನಕ್ಕೆ ನಟ ಮತ್ತು ನಿರ್ದೇಶಕ ಸಾಗರ್ ಪುರಾಣಿಕ್ 'ಒಂದಲ್ಲ ಎರಡಲ್ಲ' ಚಲನಚಿತ್ರದ ನಿರ್ದೇಶಕ ಡಿ. ಸತ್ಯಪ್ರಕಾಶ್ ಮತ್ತು ನಿರ್ಮಾಪಕ ಉಮಾಪತಿಯವರನ್ನು ದೆಹಲಿ ಕರ್ನಾಟಕ ಸಂಘದಲ್ಲಿ ದಿನಾಂಕ 23.12.2019ರಂದು ಅಭಿನಂದಿಸಲಾಯಿತು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆಯವರು ಮಾತನಾಡಿ ಪ್ರತಿಯೊಬ್ಬ ತಂದೆ ತಾಯಿಯಂದಿರುಗಳು ಮಕ್ಕಳ ಪ್ರತಿಭೆಯನ್ನು ಗುರುತಿಸಿ ಮಕ್ಕಳಿಗೆ ಪ್ರೋತ್ಸಾಹ ನೀಡಿ ಬರುವ ಅವಕಾಶಗಳನ್ನು ಸದುಪಯೋಗ ಮಾಡಿಕೊಳ್ಳಬೇಕು ಎಂದು ಕರೆ ನೀಡಿದರು.

ಪ್ರಶಸ್ತಿ ಪಡೆದ ಕಲಾವಿದರೊಂದಿಗೆ ಆರೋಗ್ಯಕರ ಚರ್ಚೆಗಳು ನಡೆದವು 'ಒಂದಲ್ಲ ಎರಡಲ್ಲ' ಚಲನಚಿತ್ರ ನಿರ್ದೇಶಕರು ಚಲನಚಿತ್ರದ ವಿಶೇಷತೆಯನ್ನು ಹೇಳುತ್ತಾ, ಕಳೆದುಹೋಗಿರುವ ಹಸುವನ್ನು ಒಬ್ಬ ಮುಸ್ಲಿಂ ಯುವಕ ಹುಡುಕುವಾಗ ಸಮಾಜದಲ್ಲಿ ನಡೆಯುವ ಪ್ರತಿಕ್ರಿಯೆಯನ್ನು ಚಿತ್ರದಲ್ಲಿ ತಿಳಿಸಲಾಗಿದೆ ಎಂದು ವಿವರಿಸಿದರು, ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ವಂದಿಸಿದರು.

***ಎಸ್. ಕುಮಾರ್***

# ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಉಡುಪಿಯ ಪೃಥ್ವಿ ಆಚಾರ್ಯ

ಭಾರತ ಸರಕಾರ ಪೆಟ್ರೋಲಿಯಂ ಮಂತ್ರಾಲಯ ಆಯೋಜಿಸಿದ 'ರಾಷ್ಟ್ರಮಟ್ಟದ ಪೈಂಟಿಂಗ್ ಸ್ಪರ್ಧೆಯಲ್ಲಿ' ಉಡುಪಿ ಜಿಲ್ಲೆಯ, ಪಟ್ಲ ಯು.ಎಸ್. ನಾಯಕ್ ಪ್ರೌಢಶಾಲೆಯ ಒಂಭತ್ತನೇ ತರಗತಿ ವಿದ್ಯಾರ್ಥಿ ಪೃಥ್ವಿ ಆಚಾರ್ಯ ಭಾಗವಹಿಸಿದ್ದಾರೆ. ಪೃಥ್ವಿ ಅರುಣ ಆಚಾರ್ಯ ಹಾಗೂ ಜ್ಯೋತಿ ಆಚಾರ್ಯ ಇವರ ಪುತ್ರ. ಚಿತ್ರಕಲಾ ಶಿಕ್ಷಕ ಸದಾನಂದ ಅವರ ಪ್ರೋತ್ಸಾಹ ಈತನ ಸಾಧನೆಗೆ ಪ್ರೇರಣೆಯಾಗಿದೆ.

ತಂದೆ ಅರುಣ ಆಚಾರ್ಯ ಚಿತ್ರಕಲೆ ಶಿಕ್ಷಕರಾಗಿ ತರಬೇತಿ ಪಡೆದಿದ್ದರೂ ಆರ್ಥಿಕ ಸಮಸ್ಯೆಯಿಂದ ವೃತ್ತಿಗೆ ಸೇರಲಿಲ್ಲ. ಇವರು ಮರದ ಕೆತ್ತನೆ ಕೆಲಸಕ್ಕೆ ಹೆಸರುವಾಸಿ. ಮುಖ್ಯ ಶಿಕ್ಷಕ ಶ್ರೀಕಾಂತ ಪ್ರಭು ಹಾಗೂ ಊರವರು ಈತನ ಸಾಧನೆಗೆ ಅಭಿಮಾನ ಪಡುತ್ತಾರೆ.

ಈ ಸ್ಪರ್ಧೆಯು ದಿನಾಂಕ





20-12-2019ರಂದು ನವದೆಹಲಿಯ ಕಾನ್ಸಿಟ್ಯೂಟ್ ಕ್ಲಬ್‌ನಲ್ಲಿ ನಡೆಯಿತು. 41 ಲಕ್ಷ ವಿದ್ಯಾರ್ಥಿಗಳಲ್ಲಿ 100 ಮಂದಿಯನ್ನು ಆಯ್ಕೆ ಮಾಡಲಾಗಿತ್ತು. ನಿರ್ದೇಶಕರ ಆರ್.ಕೆ. ಅಹುಜಾ ಅವರು ಭಾಗವಹಿಸಿದ ಮಕ್ಕಳಿಗೆ ರೂ. 25 ಸಾವಿರ, ಸ್ಯಾಮ್ಸಂಗ್ ಟ್ಯಾಬ್ಲೆಟ್ ಮೊಬೈಲ್ ಮತ್ತು ಅರ್ಹತಾ ಪತ್ರ ನೀಡಿ ಅಭಿನಂದಿಸಿದರು.

ಪೃಥ್ವಿ ಆಚಾರ್ಯ ಅವರನ್ನು ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಸ್ಮರಣಿಕೆ ನೀಡಿ ಅಭಿನಂದಿಸಿದರು. ಸಂಘದ ಆಜೀವ ಸದಸ್ಯರುಗಳಾದ ರಾಘವೇಂದ್ರ ನಾಯಕ್ ಮತ್ತು ವೈ. ಎಂ. ಹೆಗ್ಡೆ ಉಪಸ್ಥಿತರಿದ್ದರು.

# ಎಚ್.ಆರ್. ಸುಜಾತ ಅವರಿಗೆ ಅಭಿನಂದನೆ



ಸಾವಯವ ಕೃಷಿ ಪರಿಣಿತ ನಾರಾಯಣ ರೆಡ್ಡಿಯವರನ್ನು ಕುರಿತ ಈ ಬಾರಿ ರಾಷ್ಟ್ರಪ್ರಶಸ್ತಿ ಪಡೆದ "ಸರಳ ವಿರಳ" ಸಾಕ್ಷ್ಯಚಿತ್ರವನ್ನು ಸಂಘದಲ್ಲಿ ದಿನಾಂಕ 28.12.2019ರಂದು ಪ್ರದರ್ಶಿಸಲಾಯಿತು. ಈ ಸಂದರ್ಭದಲ್ಲಿ ನಿರ್ಮಾಪಕ ಶ್ರೀಮತಿ ಸುಜಾತ ಎಚ್.ಆರ್. ಹಾಗೂ ನಿರ್ದೇಶಕ ತಿಥಿ ಸಿನಿಮಾ ಖ್ಯಾತಿಯ ಈರೇಗೌಡ ಅವರನ್ನು ಸಂಘದ ಪರವಾಗಿ ಅಭಿನಂದಿಸಲಾಯಿತು. ನಿರ್ದೇಶಕರು ಮತ್ತು ನಿರ್ಮಾಪಕರು ಈ ಸಾಕ್ಷ್ಯಚಿತ್ರದ ಕುರಿತು ವಿವರ ನೀಡಿದರು.

ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಪ್ರಶಸ್ತಿ ವಿಜೇತರನ್ನು ಅಭಿನಂದಿಸಿ ಮಾತನಾಡಿದರು.

ನವದೆಹಲಿಯ ವಿಜ್ಞಾನ ಭವನದಲ್ಲಿ ನಡೆದ 66ನೇ ರಾಷ್ಟ್ರೀಯ ಚಲನಚಿತ್ರೋತ್ಸವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಅತ್ಯುತ್ತಮ ಶೈಕ್ಷಣಿಕ ಚಲನ ಚಿತ್ರ ಪ್ರಶಸ್ತಿಯನ್ನು 'ಸರಳ ವಿರಳ' ಚಿತ್ರದ ನಿರ್ಮಾಣಕ್ಕಾಗಿ ಶ್ರೀಮತಿ ಸುಜಾತಾ ಹೆಚ್.ಆರ್ ಇವರು ಉಪ ರಾಷ್ಟ್ರಪತಿ ಶ್ರೀ ಎಂ. ವೆಂಕಯ್ಯ ನಾಯ್ಡು ಅವರಿಂದ ಸ್ವೀಕರಿಸಿದರು.

ಈ ಕಾರ್ಯಕ್ರಮದಲ್ಲಿ ಕೇಂದ್ರ ಮಾಹಿತಿ ಮತ್ತು ಪ್ರಸಾರ, ಪರಿಸರ ಹಾಗೂ ಅರಣ್ಯ ಸಚಿವ ಪ್ರಕಾಶ್ ಜಾವಡೇಕರ್ ಹಾಗೂ ಕೇಂದ್ರ ಸರ್ಕಾರದ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.


ಈ ಪ್ರಶಸ್ತಿಯು 50 ಸಾವಿರ ರೂ.ನಗದು ಹಾಗೂ ರಜತ ಕಮಲ ಪ್ರಶಸ್ತಿ ಫಲಕ ಒಳಗೊಂಡಿದೆ.

ಶ್ರೀಮತಿ ಸುಜಾತಾ ಎಚ್ ಆರ್ ಅವರು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿವೃತ್ತ ನಿರ್ದೇಶಕ ಎನ್. ಆರ್. ವಿಶುಕುಮಾರ್ ಅವರ ಪತ್ನಿ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿವೃತ್ತ ನಿರ್ದೇಶಕ ಶ್ರೀ ಎನ್. ಆರ್. ವಿಶುಕುಮಾರ್, ಪ್ರೊ. ಎಚ್.ಎಸ್. ಶಿವಪ್ರಕಾಶ್, ಡಾ. ಪುರುಷೋತ್ತಮ ಬಿಳಿಮಲೆ, ಡಾ. ಅಹಲ್ಯಾಚಿಂತಾಮಣಿ ಇನ್ನಿತರರು ಉಪಸ್ಥಿತರಿದ್ದರು.

ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

# ವಸಂತ ಶೆಟ್ಟಿ ಬೆಳ್ಳಾರೆ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷ




ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ ಸಾಹಿತಿ, ಸಂಘಟಕ ವಸಂತ ಶೆಟ್ಟಿ ಬೆಳ್ಳಾರೆ ಆಯ್ಕೆಯಾಗಿದ್ದಾರೆ. ದಿನಾಂಕ 15.12.2019ರಂದು ಸಂಸ್ಥೆಗೆ ಚುನಾವಣೆ ನಡೆದಿದ್ದು ಮುಂದಿನ ಎರಡು ವರ್ಷಗಳ ಅವಧಿಗೆ ಹೊಸ ಕಾರ್ಯಕಾರಿ ಸಮಿತಿ ಕಾರ್ಯ ನಿರ್ವಹಿಸಲಿದೆ. ನೂತನವಾಗಿ ಆಯ್ಕೆಯಾದ ಪದಾಧಿಕಾರಿಗಳು ಮತ್ತು ಸದಸ್ಯರ ವಿವರ ಇಂತಿದೆ. ಉಪಾಧ್ಯಕ್ಷರು ಚಂದ್ರಶೇಖರ ಎನ್.ಪಿ., ಮತ್ತು ಟಿ.ಎಂ. ಮೈಲಾರಪ್ಪ, ಕಾರ್ಯದರ್ಶಿ ಡಾ. ಎಂ.ಎಸ್. ಶಶಿಕುಮಾರ್, ಖಜಾಂಚಿ ಟಿ.ಪಿ. ಬೆಳ್ಳಿಯಪ್ಪ.

ಸದಸ್ಯರು ಸಿ.ಎಂ. ನಾಗರಾಜ, ಚೆನ್ನು ಎಸ್. ಮಠದ, ತಿಮ್ಮಪ್ಪ ಜಿ.ಆರ್., ಶ್ರೀಮತಿ ಮಾಲಿನಿ ಪ್ರಹ್ಲಾದ್, ಶ್ರೀಮತಿ ಜಯಶ್ರೀ ಎ., ಗಿರೀಶ್ ಎಸ್., ಶ್ರೀಮತಿ ದೀನಾ ಜಾಯ್ಸ್, ಅನಂತ ರಾವ್ ದೇಸಾಯಿ, ಸಂತೋಷ್ ಕೆ.ಕೆ. ಮತ್ತು ಬಿ.ಎನ್. ಮೋಹನ್ ಚುನಾಯಿತರಾಗಿದ್ದಾರೆ.

# ಕೃಷ್ಣೈಕ್ಯರಾದ ಶ್ರೀ ವಿಶ್ವೇಶ ತೀರ್ಥ ಶ್ರೀಪಾದರು

ಉಡುಪಿಯ ಅಷ್ಟಮಠಗಳಲ್ಲಿ ಒಂದಾದ ಪೇಜಾವರ ಅಧೋಕ್ಷಜ ಮಠದ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರು ದಿನಾಂಕ 29.12.2019ರಂದು ತಮ್ಮ ಮಠದಲ್ಲೇ ಹರಿಪಾದ ಸೇರಿದರು. ಅವರಿಗೆ 88 ವರ್ಷ ವಯಸ್ಸಾಗಿತ್ತು. ಅವರು ಕರ್ನಾಟಕ ಕಂಡ ಸಂತ ಶ್ರೇಷ್ಠರಲ್ಲಿ ಒಬ್ಬರು.




ವಾದಿರಾಜರ ನಂತರ ಉಡುಪಿ ಮಠದಲ್ಲಿ ಐದನೆಯ ಬಾರಿ ಪರ್ಯಾಯ ಅಲಂಕರಿಸಿದ ಖ್ಯಾತಿ ವಿಶ್ವೇಶ ತೀರ್ಥ ಸ್ವಾಮಿಗಳದ್ದು. ಸುಬ್ರಹ್ಮಣ್ಯ ಸಮೀಪದ ರಾಮಕುಂಜದ ಮೀಯಾರು ನಿವಾಸಿಗಳಾಗಿದ್ದ ಎಂ. ನಾರಾಯಣಾಚಾರ್ಯ ಹಾಗೂ ಕಮಲಮ್ಮ ದಂಪತಿಗಳ ಎರಡನೇ ಪುತ್ರರಾಗಿ 1931 ರ ಏಪ್ರಿಲ್ 27 ರಂದು ಜನಿಸಿದ ಶ್ರೀಗಳ ಪೂರ್ವಾಶ್ರಮದ ಹೆಸರು ವೆಂಕಟರಾಮ.

ರಾಮಕುಂಜೇಶ್ವರ ಎಂಬ ಗ್ರಾಮದ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದರು. ವೆಂಕಟರಾಮರು ಏಳನೆಯ ವಯಸ್ಸಿನಲ್ಲಿಯೇ ಸನ್ಯಾಸ ದೀಕ್ಷೆ ಸ್ವೀಕರಿಸಿದರು. ಅಧೋಕ್ಷಜ ತೀರ್ಥರ ಸಂಸ್ಥಾನದ ಪೇಜಾವರ ಮಠದ ಪರಂಪರೆಯ 32ನೇ ಯತಿಯಾಗಿ ವೆಂಕಟರಾಮ 'ವಿಶ್ವೇಶ ತೀರ್ಥ'ರಾದರು. ಆದರ್ಶ ಗುಣಗಳ ಪ್ರತಿರೂಪದಂತಿದ್ದ ವಿವಿಧ ಧರ್ಮ ಪಂಥಗಳೊಂದಿಗೆ ಸೌಹಾರ್ದ ಸಂಬಂಧವನ್ನು ಹೊಂದಿದ್ದ ಪೇಜಾವರ ಶ್ರೀಗಳು ಮಾರ್ಗದರ್ಶಕರಂತೆ ಇದ್ದರು.

ದೆಹಲಿ ಮತ್ತು ದೇಶ ವಿದೇಶಗಳಲ್ಲಿ ಅಪಾರ ಭಕ್ತರನ್ನು ಮತ್ತು ಶಿಷ್ಯ ವರ್ಗವನ್ನು ಪೇಜಾವರ ಶ್ರೀಗಳು ಹೊಂದಿದ್ದರು. ದೆಹಲಿಯ ವಸಂತಕುಂಜದಲ್ಲಿ ಪೇಜಾವರ ಮಠ ಮತ್ತು ಶ್ರೀಕೃಷ್ಣಧಾಮ ಮಂದಿರವಿದೆ. 2003ರಲ್ಲಿ ದೆಹಲಿ ಕರ್ನಾಟಕ ಸಂಘದ ನೂತನ ಸಾಂಸ್ಕೃತಿಕ ಸಮುಚ್ಚಯದ ಶಿಲಾನ್ಯಾಸ ಕಾರ್ಯಕ್ರಮ ನಡೆದಿತ್ತು. ಈ ವಿಶೇಷ ಸಂದರ್ಭದಲ್ಲಿ ಪೇಜಾವರ ಶ್ರೀಗಳು ಭಾಗವಹಿಸಿ ಆಶೀರ್ವಚನ ನೀಡಿದ್ದು ಸ್ಮರಣೀಯ.

ಅವರ ಆದರ್ಶ ಗುಣಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಸಮಾಜಕ್ಕೆ ಒಳಿತನ್ನು ಮಾಡುವುದು ನಾವು ಅವರಿಗೆ ಸಲ್ಲಿಸಬಹುದಾದ ಗೌರವವಾಗಿದೆ.

ಕೃಷ್ಣೈಕ್ಯರಾದ, ನಾಡು ಕಂಡ ಅಪರೂಪದ ಸಂತ ಪೇಜಾವರ ಶ್ರೀ ವಿಶ್ವೇಶ ತೀರ್ಥ ಸ್ವಾಮೀಜಿ ಅವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ.




**2003ರಲ್ಲಿ ದೆಹಲಿ ಕರ್ನಾಟಕ ಸಂಘದ ನೂತನ ಸಾಂಸ್ಕೃತಿಕ ಸಮುಚ್ಚಯದ ಶಿಲಾನ್ಯಾಸ ಸಂದರ್ಭದಲ್ಲಿ ಭಾಗವಹಿಸಿದ ಪೇಜಾವರ ಶ್ರೀಗಳು. ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಮತ್ತು ಸುತ್ತೂರು ಮಠದ ಶ್ರೀ ಶಿವರಾತ್ರೀಶ್ವರ ದೇಶೀಕೇಂದ್ರ ಮಹಾಸ್ವಾಮಿಗಳು ಮತ್ತು ಮಾಜಿ ಕೇಂದ್ರ ಸಚಿವ ದಿ. ಅನಂತ್‌ಕುಮಾರ್ ಅವರನ್ನು ಕಾಣಬಹುದು.**

# ಮರೆಯಾದ ಕ್ರಿಯಾಶೀಲ ಚೇತನ ಎನ್.ಪಿ. ಭಟ್

ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ ಹಿರಿಯ ಸಾಹಿತಿ ಮತ್ತು ನಿವೃತ್ತ ಆದಾಯ ತೆರಿಗೆ ಆಯುಕ್ತ ಎನ್.ಪಿ. ಭಟ್ ಅವರು ತಮ್ಮ ಸ್ವಗೃಹದಲ್ಲಿ 29.12.2019ರಂದು ನಿಧನ ಹೊಂದಿದರು. ಅವರು ತಮ್ಮ ಪತ್ನಿ ನಿವೃತ್ತ ಪ್ರಾಧ್ಯಾಪಕಿ ಡಾ. ಯಶೋದಾ ಭಟ್ಟ ಮತ್ತು ಸೊಸೆ ಸುಮಂಗಲಾ ಭಟ್ಟ ಅವರನ್ನು ಅಗಲಿದ್ದಾರೆ. ಎನ್.ಪಿ. ಭಟ್ ಎಂದೇ ಹೆಸರಾಗಿದ್ದ ನಾರಾಯಣ ಪರಮೇಶ್ವರ ಭಟ್ ಅವರು 1990–92ರ ಅವಧಿಯಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಯ ಮೂಲಕ ಸಂಘದ ಬೆಳವಣಿಗೆಗೆ ಅಪಾರವಾಗಿ ಶ್ರಮಿಸಿದ್ದರು. ಸಂಘದ ಮುಖಪತ್ರಿಕೆ ಅವರ ಕಾರ್ಯಾವಧಿಯಲ್ಲಿ ಆರಂಭವಾಗಿತ್ತು.

ಉತ್ತಮ ಬರಹಗಾರರು, ಅರ್ಥಶಾಸ್ತ್ರಜ್ಞರು ಮತ್ತು ಆದಾಯ ತೆರಿಗೆ ಆಯುಕ್ತರಾಗಿದ್ದ ಭಟ್ಟರು ತಮ್ಮ ನಿವೃತ್ತಿಯ ನಂತರ ಧಾರವಾಡದಲ್ಲಿ ನೆಲೆಸಿ, ಸಾಹಿತ್ಯ, ಸಂಗೀತ, ಕಲೆ ಮತ್ತು ಸಮಾಜ ಸೇವೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಅವನಿ ರಸಿಕರ ರಂಗ ಎಂಬ ಸಂಸ್ಥೆಯನ್ನು ಪ್ರಾರಂಭಿಸಿ ದಶಕಕ್ಕೂ ಹೆಚ್ಚು ಕಾಲ ಸಾಂಸ್ಕೃತಿಕ, ಸಾಹಿತ್ಯಿಕ, ಸಂಗೀತ ಕಲೆಗಳನ್ನು ಶ್ರೀಮಂತಗೊಳಿಸಲು ಶ್ರಮಿಸಿದ್ದರು. ಅನೇಕ ಉದಯೋನ್ಮುಖ ಪ್ರತಿಭೆಗಳಿಗೆ ತಮ್ಮ ಅವನಿ ರಸಿಕರ ರಂಗದ ಮೂಲಕ ವೇದಿಕೆ ಒದಗಿಸಿ ಪ್ರತಿಭಾ ಪ್ರದರ್ಶನಕ್ಕೆ ನೆರವಾಗಿದ್ದರು. ಕರ್ನಾಟಕ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದಲ್ಲಿ ದತ್ತಿನಿಧಿ ಉಪನ್ಯಾಸ ಮಾಲಿಕೆಗೆ



ನೆರವಾಗಿದ್ದರು. ಜ್ಞಾನಪೀಠ ವಿಜೇತ ಪ್ರೊ. ವಿ.ಕೃ. ಗೋಕಾಕ ಅವರ ಅಳಿಯನಾಗಿದ್ದ ಭಟ್ಟರು ಪ್ರಕಾಶನ ಕ್ಷೇತ್ರದಲ್ಲೂ ತಮ್ಮ ಕಾಣಿಕೆ ಸಲ್ಲಿಸಿದ್ದಾರೆ. ರಂಜನ ಭಟ್ಟ, ನಾರಂಗಿ ಭಟ್ಟ ಎಂಬ ಕಾವ್ಯನಾಮದಿಂದ ಅನೇಕ ಕೃತಿಗಳನ್ನು ರಚಿಸಿದ್ದಾರೆ.

ಗ್ರಾಹಕರ ವೇದಿಕೆಯ ಅಧ್ಯಕ್ಷರಾಗಿದ್ದ ಭಟ್ಟರು ಗ್ರಾಹಕರಲ್ಲಿ ತಮ್ಮ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಲು ಹಲವಾರು ಕಾರ್ಯಕ್ರಮಗಳನ್ನು ಏರ್ಪಡಿಸಿದ್ದರು. ವಿವಿಧ ರಂಗಗಳಲ್ಲಿ ಅವರ ಸೇವೆಯನ್ನು ಗುರುತಿಸಿದ ಸರಕಾರ ಮತ್ತು ವಿವಿಧ ಸಂಘ ಸಂಸ್ಥೆಗಳು ಭಟ್ಟರಿಗೆ ಪ್ರತಿಷ್ಠಿತ ಪ್ರಶಸ್ತಿಗಳನ್ನು ನೀಡಿ ಗೌರವಿಸಿದೆ.

ಅಗಲಿದ ಹಿರಿಯ ಚೇತನ ಎನ್.ಪಿ. ಭಟ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ.

## ಎನ್.ಪಿ. ಭಟ್ಟ ಜೀವನದ ಪ್ರಮುಖ ಘಟನೆಗಳು

ಜನನ 09.03.1932 ಶಿರಾಲಿ

ಶಾಲಾ ಶಿಕ್ಷಣ – ಶಿರಾಲಿ, ಶಿರೂರು, ಹೊನ್ನಾವರ

ಬಿ.ಎ. ಆನರ್ಸ್–ಎಕನಾಮಿಕ್ಸ್ 1951ರಲ್ಲಿ ಪುಣೆ ವಿಶ್ವವಿದ್ಯಾಲಯಕ್ಕೆ ಪ್ರಥಮ.

ಎಂ.ಎ. ಸಾರ್ವಜನಿಕ ಆಡಳಿತ, ಕ್ಯಾಲಿಫೋರ್ನಿಯಾ ವಿ.ವಿ. ಅಮೇರಿಕಾ 1963

ಐ.ಆರ್.ಎಸ್.– 1955

ಕೇಂದ್ರ ಸರಕಾರದ ಕಂದಾಯ ಇಲಾಖೆಯಲ್ಲಿ ಆದಾಯ ತೆರಿಗೆ ಖಾತೆಯಲ್ಲಿ ಅಧಿಕಾರಿಯಾಗಿ ಸೇವೆ 1957 ರಿಂದ 1992–ಮುಂಬೈ, ಅಹಮದಾಬಾದ್, ಇಂದೋರ್, ಭೋಪಾಲ್, ಚೆನ್ನೈ, ನವದೆಹಲಿಯಲ್ಲಿ ಕಮಿಷನರ್ ಆಗಿ ಸೇವೆ.

'ರಂಜನ ಭಟ್ಟ' ಕಾವ್ಯನಾಮದಲ್ಲಿ ಸಾಹಿತ್ಯ ಕೃತಿಗಳ ಪ್ರಕಟಣೆ

1. ದಕ್ಷಿಣ ಧ್ರುವ ನಕ್ಕಾಗ–ಕಥಾ ಸಂಕಲನ
2. ಅಲ್ಲಿಯ–ಇಲ್ಲಿಯ ಕಥೆಗಳು
3. ಹೆಮ್ಮರಗಳು ತಲೆಎತ್ತಿವೆ–ಕಾವ್ಯ
4. ಕುಬೇರ ರಾಜ್ಯದ ಚಿತ್ರ–ವಿಚಿತ್ರ: ಅಮೇರಿಕದ ಪ್ರವಾಸ ಕಥನ
5. ಪ್ರಪಂಚದಲ್ಲಿ ನೆನಪಿನ ಉಯ್ಯಾಲೆ–ಆತ್ಮಕಥನ
6. ಮನದಾಳದ ಮುತ್ತುರತ್ನಗಳು–ವ್ಯಕ್ತಿಚಿತ್ರಗಳು

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾಗಿ ಸೇವೆ–1990–92ರ ಅವಧಿ

1999ರಲ್ಲಿ ಧಾರವಾಡಕ್ಕೆ ಬಂದು, ನಾರಾಯಣಪುರದಲ್ಲಿ ಅವನಿ 'ರಸಿಕರ ರಂಗ' ಸ್ಥಾಪಿಸಿ ಸಾಹಿತ್ಯ–ಸಾಂಸ್ಕೃತಿಕ ಕಾರ್ಯಕ್ರಮಗಳ ಸಂಚಾಲಕರಾಗಿ ಸೇವೆ. 64 ವಿವಿಧ ವಿಷಯಗಳ ಪುಸ್ತಕಗಳು ಮತ್ತು ಅವನಿ ವಾರ್ತಾ ಮಾಸಪತ್ರಿಕೆ ಪತ್ನಿ ಡಾ. ಯಶೋಧಾ ಅವರ ಸಹಯೋಗದಲ್ಲಿ ಪ್ರಕಟಣೆ.

ಅವನಿ ರಸಿಕರ ರಂಗದಿಂದ ಸಾಧಕರಿಗೆ ವಾರ್ಷಿಕ ಪ್ರಶಸ್ತಿ

1. ಜಿ.ಆರ್. ಪಾಂಡೇಶ್ವರ ನೆನಪಿನ ಪತ್ರಕರ್ತರಿಗೆ ಪುರಸ್ಕಾರ
2. ಗ್ರಾಹಕ ಭೂಷಣ ಪುರಸ್ಕಾರ
3. ದೇವಾಂಗನಾ ಶಾಸ್ತ್ರೀ ಸಾಹಿತ್ಯ ಪುರಸ್ಕಾರ–ಉದಯೋನ್ಮುಖ ಲೇಖಕಿಯರ ಕೃತಿಗಳಿಗೆ
4. ಧಾರವಾಡದಲ್ಲಿ ಎಂ. ಸುದರ್ಶನರಾಜ ಅವರ ಸಹಕಾರದಿಂದ ಗ್ರಾಹಕರ ವೇದಿಕೆ ಸಂಚಾಲಕ
5. ಧಾರವಾಡದಲ್ಲಿ ಇನ್‌ಟ್ಯಾಕ್ ಶಾಖೆ ಆರಂಭ
6. ಮಾಳಮಡ್ಡಿಯಲ್ಲಿ ಎರಡು ವಾಚನಾಲಯಗಳ ಸ್ಥಾಪನೆ
7. ವಿ.ಕೃ. ಗೋಕಾಕ್ ರಾಷ್ಟ್ರೀಯ ಸ್ಮಾರಕ ಟ್ರಸ್ಟಿನ ಸಂಸ್ಥಾಪಕ ಸದಸ್ಯ.

## 'ಸಾಹಿತ್ಯ ಸಂಜೆ'ಯ ರೂವಾರಿ

ಎನ್.ಪಿ. ಭಟ್ ಅವರು ನನಗೆ ಹಿರಿಯ ಸಹೋದರ ಮತ್ತು ಮಾರ್ಗದರ್ಶಕನಂತೆ ಇದ್ದರು. ನಾನು ದೆಹಲಿಯ ಗಾರ್ಗಿ ಕಾಲೇಜಿನಲ್ಲಿ ಉಪನ್ಯಾಸಕಿ ಆಗಿದ್ದಾಗ ಅವರ ಪತ್ನಿ ಶ್ರೀಮತಿ ಯಶೋದಾ ಭಟ್ ದೌಲತ್ ರಾಮ್ ಕಾಲೇಜಿನಲ್ಲಿ ಆಂಗ್ಲ ಸಾಹಿತ್ಯ ಉಪನ್ಯಾಸಕಿ. ಅವರು ಮೇರು ಸಾಹಿತಿ ದಿ. ವಿ.ಕೆ. ಗೋಕಾಕ್ ಅವರ ಸುಪುತ್ರಿ.

ಎನ್.ಪಿ. ಭಟ್ ಅವರು 1990–92ರ ಅವಧಿಯಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾಗಿದ್ದಾಗ 'ಸಾಹಿತ್ಯ ಸಂಜೆ' ಎಂಬ ವಿನೂತನ ಕಾರ್ಯಕ್ರಮ ಆರಂಭಿಸಿದ್ದರು. ಒಮ್ಮೆ ಡಾ. ಚಂದ್ರಶೇಖರ ಕಂಬಾರರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದ ಸಂದರ್ಭ ಅವರಿಗೆ ಅಭಿನಂದನೆ ಆಯೋಜಿಸಲಾಗಿತ್ತು. ಕಂಬಾರರು ಆಗಮಿಸುವುದು ತಡವಾದಾಗ ರಾತ್ರಿ ಒಂಭತ್ತರ ಬಳಿಕ ಕಾರ್ಯಕ್ರಮ ನಡೆದಿತ್ತು. ಕಾರ್ಯಕ್ರಮದ ಸಂಯೋಜಕಿಯಾಗಿ ನಾನು ಭಾಗವಹಿಸಿದವರಿಗೆ ಉಪಹಾರ ವ್ಯವಸ್ಥೆ ಮತ್ತಿತರ ಕೆಲಸಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿದೆ ಎನ್ನುವ ಕಾರಣಕ್ಕೆ ಭಟ್ಟರು ನನ್ನನ್ನು 'ಸತ್ಕಾರದಲ್ಲಿ ನೀನು ಅನ್ನಪೂರ್ಣೆ, ಸಾಹಿತ್ಯದಲ್ಲಿ ಶಾರದೆ' ಎಂದು ಮೆಚ್ಚುಗೆ ಸೂಚಿಸಿದರು. ಆ ಅವಧಿಯಲ್ಲಿ ಶ್ರೀ ಸಿ.ವಿ. ಗೋಪಿನಾಥ್ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಆ ದಿನಗಳಲ್ಲಿ ಆಯೋಜಿಸಿದ 'ಟು ತವುಸಂಡ್ ಇಯರ್ಸ್ ಆಫ್ ಕನ್ನಡ ಲಿಟರೇಚರ್' ಎಂಬ ವಿಚಾರ ಸಂಕಿರಣ ವಿಶಿಷ್ಟವಾಗಿತ್ತು. ಮೇರು ಸಾಹಿತಿಗಳಾದ ದಿ. ಅಮೃತಾ ಪ್ರೀತಂ, ದಿ. ಇಂದಿರಾ ಗೋಸ್ವಾಮಿ ಮತ್ತು ಡಾ. ಎಸ್. ಎಲ್. ಭೈರಪ್ಪ ಅಂದು ಭಾಗವಹಿಸಿದ್ದು ನೆನಪು ಹಸಿರಾಗಿದೆ. ಹಿರಿಯ ಚೇತನ ಎನ್.ಪಿ. ಭಟ್ ಅವರಿಗೆ ನನ್ನ ಅಂತಿಮ ನಮನಗಳು.

***ಡಾ. ಅಹಲ್ಯಾಚಿಂತಾಮಣಿ***

# ಎನ್.ಪಿ. ಭಟ್: ನೆನಪುಗಳ ಜಾಡಿನಲ್ಲಿ

ಭಟ್ಟರು ನನಗೆ ಹಳೆಯ ಪರಿಚಯವೇನಲ್ಲ. ನನಗೆ ಅವರ ಪರಿಚಯವಾದದ್ದು 1991ರ ಮಾರ್ಚ್ ತಿಂಗಳಲ್ಲಿ. ನಾಲ್ಕು ವರುಷಗಳ ಅಮೆರಿಕನ್ ಅಧ್ಯಯನ ರಜೆಯಿಂದ ದೆಹಲಿ ವಿಶ್ವವಿದ್ಯಾಲಯಕ್ಕೆ ಮರಳಬಂದಿದ್ದೆ. ಆ ವೇಳೆಗಾಗಲೇ ಭಟ್ಟರು ಹಾಗೂ ಗೋಪಿನಾಥ್ ತಂಡ ಸಂಘದ ವಹಿವಾಟುಗಳಿಗೆ ಹೊಸ ತಿರುವೊಂದನ್ನು ಕೊಟ್ಟಿದ್ದರು. ‘ಅಭಿಮತ’ ಆರಂಭವಾಗಿ ಒಂದೆರಡು ಸಂಚಿಕೆಗಳು ಬಂದಿದ್ದವು. ವೆಂಕಟಾಚಲ ಹೆಗಡೆ, ಚಂದ್ರಶೇಖರ್, ರಂಗಸ್ವಾಮಯ್ಯ ಮುಂತಾದ ಯುವ ಹಾಗೂ ಉತ್ಸಾಹಿ ಸಾಹಿತ್ಯಾಸಕ್ತರ ತಂಡ ಪತ್ರಿಕೆಯನ್ನು ತರುತ್ತಿತ್ತು. ಅದರ ಸಂಪಾದಕ ಮಂಡಳಿಗೆ ನಾನೂ ಸೇರ್ಪಡೆಯಾದೆ. ಇದೇ ಸಂದರ್ಭದಲ್ಲಿಯೇ ಭಟ್ಟರು ಕನ್ನಡೇತರರಿಗೆ ಕನ್ನಡ ಸಾಹಿತ್ಯ ಪರಂಪರೆಯನ್ನು ಪರಿಚಯ ಮಾಡಿಕೊಡುವ ಉದ್ದೇಶದಿಂದ ‘ಒಂದು ಸಾವಿರ ವರ್ಷಗಳ ಕನ್ನಡ ಸಾಹಿತ್ಯ ಪರಂಪರೆ’ ಎಂಬ ವಿಚಾರ ಸಂಕಿರಣವನ್ನು 1991ರ ಮಾರ್ಚ್ 17-18ರಂದು ಆಯೋಜಿಸಿದ್ದರು. ಕರ್ನಾಟಕದ ಅನೇಕ ಪ್ರಮುಖ ಸಾಹಿತಿಗಳು ಮತ್ತು ವಿಮರ್ಶಕರು ಅದರಲ್ಲಿ ಭಾಗಿಯಾಗಿದ್ದರು. ಅದರಲ್ಲಿ ಒಂದು ಪ್ರಬಂಧವನ್ನು ಓದಲು ನನ್ನನ್ನು ಭಟ್ಟರು ಕೇಳಿಕೊಂಡಿದ್ದರು. ಆಗ ಆರಂಭವಾದ ಅವರ ಜೊತೆಯ ಒಡನಾಟ ಭಟ್ಟರು ದೆಹಲಿ ಬಿಟ್ಟು ಧಾರವಾಡಕ್ಕೆ ಹೋಗಿ ನೆಲಸುವ ತನಕ ಮುಂದುವರೆಯಿತು.

ಈ ವಿಚಾರ ಸಂಕಿರಣ ಒಂದು ಮಾದರಿಯಾಗಿದ್ದಲ್ಲದೆ, ಸಂಘವು ಭಾರತೀಯ ಭಾಷೆಗಳ ಹಿನ್ನೆಲೆಯಲ್ಲಿ ನಡೆಸಿದ ವಾರ್ಷಿಕ ವಿಚಾರ ಸಂಕಿರಣಗಳ ಒಂದು ಪರಂಪರೆಯನ್ನೇ ಸೃಷ್ಟಿಸಿತು. ಮುಂದಿನ 5-6 ವರ್ಷಗಳ ಅವಧಿಯಲ್ಲಿ ನಾನು ಸಂಘದ ಸಹಯೋಜನೆಯಲ್ಲಿ ಪ್ರತಿ ವರ್ಷ ವಿಚಾರ ಸಂಕಿರಣವೊಂದನ್ನು ದೆಹಲಿ ವಿಶ್ವವಿದ್ಯಾಲಯದಲ್ಲಿ ಅಥವಾ ಸಂಘದಲ್ಲಿ ಆಯೋಜಿಸಲು ಸಾಧ್ಯವಾಯಿತು. ಈ ಹಿನ್ನೆಲೆಯಲ್ಲಿ ‘ಮಧ್ಯಕಾಲೀನ ಭಾರತೀಯ ಸಾಹಿತ್ಯ ಮತ್ತು ಮಹಿಳಾ ಸಂತ ಕವಿಗಳು’ (1992), ‘ಬಸವಣ್ಣನವರ ಬಗ್ಗೆ ಅಂತರ್-ಭಾಷಿಕ ಭಾರತೀಯ ದೃಷ್ಟಿಕೋಣಗಳು’ (1993), ‘ಫಕೀರ್ ಮೋಹನ್ ಸೇನಾಪತಿ ಮತ್ತು 19ನೇ ಶತಮಾನದ ಭಾರತೀಯ ಸಮಾಜ’ (1994), ‘ಭಾರತೀಯ ಮಹಾಕಾವ್ಯಗಳ ಪರಂಪರೆ’ (1995), ‘ಭಾರತೀಯ ಸಾಹಿತ್ಯದಲ್ಲಿ ಕಿಲಾಡಿ ನಾಯಕರು’ (1966), ‘ಭಾರತೀಯ ಪ್ರತಿನಿಧೀಕರಣಗಳಲ್ಲಿ ವಸಾಹತುಶಾಹಿ ಚಿತ್ರಣ’ (1997), ಇತ್ಯಾದಿ ವಿಚಾರ ಸಂಕಿರಣಗಳನ್ನು ನೆನೆಯಬಹುದು. ಈ ವಿಚಾರ ಸಂಕಿರಣಗಳಲ್ಲಿ ಒಂದು ವಿಶೇಷ ಅಧಿವೇಶನ ಕನ್ನಡವನ್ನು ಕುರಿತಾಗಿದ್ದು ಮಿಕ್ಕವು ತುಲನಾತ್ಮಕ ಭಾರತೀಯ ಪರಿಪೇಕ್ಷೆಯನ್ನು ಹೊಂದಿರುತ್ತಿದ್ದವು. ಪ್ರಖ್ಯಾತ ಕನ್ನಡ ಹಾಗು ಭಾರತೀಯ ಸಾಹಿತ್ಯಗಳ ವಿದ್ವಾಂಸರು ಇವುಗಳಲ್ಲಿ ಭಾಗವಹಿಸುತ್ತಿದ್ದರು ಈ ವಿಚಾರ ಸಂಕಿರಣಗಳು ವಿಶ್ವವಿದ್ಯಾಲಯ ಹಾಗೂ ಸಾಂಸ್ಕೃತಿಕ ಸಂಸ್ಥೆಗಳ ಸಹಕಾರಕ್ಕೆ ಮಾದರಿಯಾಯಿತಲ್ಲದೆ ಸಂಘದ ಹೆಸರು ಅಖಿಲ ಭಾರತೀಯ ಮಟ್ಟದಲ್ಲಿ ಪರಿಚಯವಾಗುವುದರಲ್ಲಿ ಸಹಕಾರಿಯಾಯಿತು. ಈ ದಿನಗಳು ಅಂತರ್-ಜಾಲವನ್ನು ಇನ್ನು ನೋಡದ ದಿನಗಳು ಎಂಬುದನ್ನು ನೆನಪಿಡಬೇಕು. ಭಟ್ಟರು ತಮ್ಮ ಅಧ್ಯಕ್ಷ ಸ್ಥಾನ ಬಿಟ್ಟ ನಂತರವೂ ಈ ವಿಚಾರ ಸಂಕಿರಣಗಳು ಮುಂದುವರೆದವು ಎಂಬುದು ಅವರ ದೂರದೃಷ್ಟಿ ಮತ್ತು ಕಾರ್ಯನಿಯೋಜನೆಯ ಗುಣಮಟ್ಟವನ್ನು ಸೂಚಿಸುತ್ತದೆ. ವಿಚಾರ ಸಂಕಿರಣಗಳ ರೂಪುರೇಷೆಯಲ್ಲಿ ಆಸಕ್ತಿ ವಹಿಸುತ್ತಿದ್ದರೂ ಅದರ ನಿರ್ವಹಣೆಯಲ್ಲಿ ಮಧ್ಯಪ್ರವೇಶ ಮಾಡದೆ ಉಳಿಯುವುದು ಹಾಗೂ ಕುಳಿತು ಪ್ರಬಂಧಗಳನ್ನು ಗಮನವಿಟ್ಟು ಕೇಳುತ್ತಿದ್ದುದು ಹಾಗೂ ಚರ್ಚೆಯಲ್ಲಿ ಭಾಗವಹಿಸುತ್ತಿದ್ದುದು ಅವರ ವಿಶೇಷವಾಗಿತ್ತು. ಸಂಘದ ವಿಚಾರ ಸಂಕಿರಣಗಳಿಗೆ ಒಂದು ಅಖಿಲ ಭಾರತೀಯ ಮತ್ತು ಅಕೆಡೆಮಿಕ್ ದೃಷ್ಟಿಕೋಣವನ್ನು ತಂದುಕೊಟ್ಟ ಶ್ರೇಯಸ್ಸು ಭಟ್ಟರಿಗೆ ಸಲ್ಲುತ್ತದೆ. ಅವರು ಆಯೋಜಿಸುತ್ತಿದ್ದ ಎಲ್ಲ ಕಾರ್ಯಕ್ರಮಗಳಲ್ಲಿ ಒಂದು ರೀತಿಯ ತನ್ನತನ ಇರುತ್ತಿತ್ತು. ಅದು ಸಾಹಿತ್ಯಿಕ ಕಾರ್ಯಕ್ರಮವಾಗಿರಬಹುದು, ಸಂಗೀತ ಕಾರ್ಯಕ್ರಮವಾಗಿರಬಹುದು, ಎಲ್ಲವೂ ಅಚ್ಚುಕಟ್ಟಾಗಿರುತ್ತಿತ್ತು. ಕುಮಾರ ಗಂಧರ್ವ ಹಾಗೂ ಬಾಳಪ್ಪ ಹುಕ್ಕೇರಿ ಅವರ ಸಂಗೀತ ಕಾರ್ಯಕ್ರಮಗಳು ಇದಕ್ಕೆ ಒಳ್ಳೆಯ ನಿದರ್ಶನಗಳು. ಭಟ್ಟರಿಗಿದ್ದ ಅಪಾರ ಪರಿಚಯ ಹಾಗೂ ಸಂಪರ್ಕಗಳು ಇಂತಹ ಕಾರ್ಯಕ್ರಮ ನಿರ್ವಹಣೆಯ ಚಾತುರ್ಯವನ್ನು ಅವರಿಗೆ ತಂದು ಕೊಟ್ಟಿದ್ದವು.

ಸಂಘದ ಮುಖಪತ್ರಿಕೆ ‘ಅಭಿಮತ’ವನ್ನು ಆರಂಭಿಸಿದ ಹಾಗೂ ಮುನ್ನಡೆಸಿದ ಹೆಸರೂ ಭಟ್ಟರಿಗೇ ಸಲ್ಲಬೇಕು. ನಾನು ಸಂಘದ ಒಳಗೆ ಪ್ರವೇಶಮಾಡುವ ವೇಳೆಗಾಗಲೇ ‘ಅಭಿಮತ’ ಆರಂಭವಾಗಿತ್ತು. 1991 ಭಾರತದಲ್ಲಿ ಡಿಟಿಪಿಯ ಆರಂಭದ ದಿನಗಳು. ಆಗ ಸಂಘದ ಕಾರ್ಯದರ್ಶಿಯಾಗಿದ್ದ ಗೋಪೀನಾಥ್ ಇಂಜಿನಿಯರ್ ಕೂಡ ಆಗಿದ್ದರಿಂದ ‘ಅಭಿಮತ’ ಡಿಟಿಪಿ ಆಗಿ ಬರಬೇಕೆಂಬ ಕೆಲವರ ಬೇಡಿಕೆಗೆ ತಮ್ಮ ಕುಮ್ಮಕ್ಕು ನೀಡಿದ್ದರು. ಅಮೇರಿಕದಲ್ಲಿ ಹರಿಹರೇಶ್ವರ ಅವರು ಡಿಟಿಪಿ ಮಾಡಿ ತರುತ್ತಿದ್ದ ‘ಅಮೆರಿಕನ್ನಡ’ವನ್ನು ಸಮೀಪದಿಂದ ನೋಡಿದ್ದ ನಾನು ಅದಕ್ಕೆ ಒತ್ತಾಯ ಮಾಡಿದೆ. ಭಟ್ಟರಿಗೆ ಅದರ ಬಗ್ಗೆ ಅಷ್ಟೇನೂ ಮನಸ್ಸು ಇರಲಿಲ್ಲವಾದರೂ ನಾವು ಕೆಲವರ ಒತ್ತಾಯಕ್ಕೆ ಒಪ್ಪಿದರು. ಆದರೆ ಅದರ ಕಾರ್ಯವಿಧಾನ ನಾವು ಊಹಿಸಿದಷ್ಟು ಸರಳವಾಗಿರಲಿಲ್ಲ. ಮೊದಲಿಗೆ ಕೆ.ಪಿ. ರಾವ್ ಅವರ ‘ಸೇಡಿಯಾಪು’ ತಂತ್ರಾಂಶದ ಮೊದಲ ಆವೃತ್ತಿಯನ್ನು ಉಪಯೋಗಿಸಿ ಬರಹಗಳನ್ನು ತಯಾರಿಸಿ ನಂತರ ಗೋಪಿನಾಥ್ ಮನೆಯಲ್ಲಿದ್ದ ಡಾಟ್-ಮ್ಯಾಟ್ರಿಕ್ಸ್ ಪ್ರಿಂಟರಿನಿಂದ ಅದರ ಮುದ್ರಿತ ಆವೃತ್ತಿಯನ್ನು ಪಡೆದುಕೊಳ್ಳಬೇಕು. ಮುದ್ರಣಕ್ಕೆ ಸೂಕ್ತ ಪ್ರತಿಗಾಗಿ ಪ್ರಿಂಟರ್ ಅದನ್ನು 6 ಬಾರಿ ಪ್ರಿಂಟ್ ಮಾಡಬೇಕಾಗುತ್ತಿತ್ತು. ಅದನ್ನು ಕತ್ತರಿಸಿ, ಜೋಡಿಸಿ, ಅಂಟಿಸಿ ಅದನ್ನು ಮುದ್ರಣಕ್ಕೆ ಕಳಿಸಬೇಕು. ಮೊದಲ ಡಿಟಿಪಿ ಸಂಚಿಕೆ ಹೊರಬಂದಾಗ ಅದಕ್ಕೆ ಕುಮ್ಮಕ್ಕು ನೀಡಿದ ಅನೇಕರಿಗೆ ಮುಖಭಂಗವಾಗಿತ್ತು. ತೀರಾ ಕೆಟ್ಟದಾದ ಮಸಕುಮಸಕಾದ ಮುದ್ರಣ ಹಾಗೂ ಮುದ್ರಣ ದೋಷಗಳಿಂದ ಕೂಡಿದ್ದು ಪತ್ರಿಕೆಯೊಂದನ್ನು ಹೇಗೆ ತರಬಾರದು ಎಂಬುದಕ್ಕೆ ಉದಾಹರಣೆಯಂತಿತ್ತು. ಆದರೆ ಭಟ್ಟರು ನಮ್ಮನ್ನು ಅದಕ್ಕಾಗಿ ಆಕ್ಷೇಪಿಸಲಿಲ್ಲ. ಬದಲಿಗೆ ಸಮಾಧಾನ ಹೇಳಿದರು. ಮುಂದಿನ ಸಂಚಿಕೆಗೆ ಈ ದೋಷಗಳನ್ನು ನಿವಾರಿಸೋಣ ಎಂದು ಹುರಿದುಂಬಿಸಿದರು. ಈ ಬಗೆಯ ಮುಂದಾಳುತನವನ್ನು ನಾನು ತುಂಬಾ ಕಡಿಮೆ ಜನರಲ್ಲಿ ಕಂಡಿದ್ದೇನೆ. ಇಂದು ‘ಅಭಿಮತ’ ಮತ್ತು ಅದರ ಮುದ್ರಣ ಕಣ್ಸೆಳೆಯುವಂಥದ್ದಾಗಿದೆ. ಅದರ ಆರಂಭಿಕ ಹೆಜ್ಜೆಗಳನ್ನು ಕಣ್ಮುಂದೆ ತಂದುಕೊಂಡಾಗಷ್ಟೇ ಅದರ ಹಿಂದಿದ್ದ ಕನಸು ಮತ್ತು ಸಾಧನೆಗಳನ್ನು ಅರಿಯಲು ಸಾಧ್ಯ. ಇವುಗಳನ್ನು ಸಾಧ್ಯಮಾಡಿದವರು, ಅದಕ್ಕೆ ಅಡಿಪಾಯ ಹಾಕಿದವರು ಭಟ್ಟರು.

ಭಟ್ಟರು ಸಾಹಿತ್ಯಿಕ ವಾತಾವರಣದಲ್ಲಿ ಹುಟ್ಟಿ ಬೆಳೆದು ಬಂದವರು. ಅವರ ಮಾವ ಸುಪ್ರಸಿದ್ಧ ವಿದ್ವಾಂಸರಾದ ಗೋಕಾಕರು, ಪತ್ನಿ ಯಶೋಧಾ ಭಟ್ ದೆಹಲಿ ವಿಶ್ವವಿದ್ಯಾಲಯದ ಇಂಗ್ಲಿಷ್ ಪ್ರಾಧ್ಯಾಪಕರು ಹಾಗೂ ಹಲವಾರು ವಿದೇಶೀ ನಿಯತಕಾಲಿಕ ಪತ್ರಿಕೆಗಳ ಸಂಪಾದಕ ಮಂಡಳಿಯ ಸದಸ್ಯರಾಗಿದ್ದವರು. ಅವರ ಸೊಸೆ ಕಡಂಗೋಡ್ಲು ಶಂಕರಭಟ್ಟರ ಮನೆಯಿಂದ ಬಂದವರು. ಹೀಗಾಗಿ ಅವರ ಮನೆಯಲ್ಲಿ ಯಾವಾಗಲೂ ಸಾಹಿತ್ಯಿಕ ವಾತಾವರಣ ಇರುತ್ತಿತ್ತು. ಆ ದಿನಗಳಲ್ಲಿ ನಾನು ರೋಹಿಣಿಯಲ್ಲಿ ವಾಸವಾಗಿದ್ದೆ. ಅವರೂ ಕರೋಲ್ ಬಾಗ್ ಬಿಟ್ಟು ರೋಹಿಣಿಯಲ್ಲಿ ಕೊಂಡಿದ್ದ ಮನೆಗೆ ಬಂದಿದ್ದರು. ಹೀಗಾಗಿ ನನಗೆ ಅವರುಗಳನ್ನು ಆಗಾಗ ಭೇಟಿಯಾಗುವ ಅವಕಾಶ ಒದಗಿಬರುತ್ತಿತ್ತು. ಈ ಮಿಲನಗಳು ಹಲವಾರು ಸ್ತರಗಳ ವಿಚಾರವಿನಿಮಯ ಹಾಗೂ ಸಂಘಕ್ಕೆ ಸಂಬಂಧಿಸಿದಂತೆ ಹೊಸದಾದ ಯೋಜನೆಗಳನ್ನು ರೂಪಿಸುವಲ್ಲಿ ಸಹಾಯಕಾರಿ ಅಗುತ್ತಿತ್ತು. ನಾನು ಕೇವಲ ಅಕೆಡೆಮಿಕ್ ಆದ ವಿಚಾರಗಳ ಬಗ್ಗೆ ಮಾತನಾಡುತ್ತಾ ಕೆಲವು ವರ್ಷಗಳನ್ನು ಕಳೆದಿರುವ ಸಂವೇದನೀಯ ವ್ಯಕ್ತಿಗಳಲ್ಲಿ ಭಟ್ಟರು ಒಬ್ಬರು. ಭಟ್ಟರು ದೆಹಲಿ ಬಿಟ್ಟು ಧಾರವಾಡಕ್ಕೆ ಹೋದ ನಂತರ ಅವರ ಸಂಪರ್ಕ ಕಡಿದುಹೋಯಿತು. ಅವರ ಜೊತೆ ನಾನು ಕಳೆದ ದಿನಗಳು ಕೆಲವೇ ವರ್ಷಗಳಾದರೂ ಅವು ಎಂದೆಂದಿಗೂ ಚಿರಸ್ಥಾಯಿಯಾಗಿ ಉಳಿಯುವ ನೆನಪುಗಳು.

***ಡಾ. ಟಿ.ಎಸ್. ಸತ್ಯನಾಥ್***

# ಎನ್ನ ನೆನಪಿನಂಗಳದಲ್ಲಿ ಶ್ರೀ ನಾರಾಯಣ ಪರಮೇಶ್ವರ ಭಟ್ಟರು

ಕನ್ನಡ ಸಾರಸ್ವತ ಲೋಕ ಒಬ್ಬ ಧೀಮಂತ, ಕನ್ನಡದ ಬಗ್ಗೆ ಅಪಾರ ಕಳಕಳಿಯನ್ನು ತೋರಿದ, ಇಂದು ನಾವು ಹೆಮ್ಮೆಪಡುವ ಆತ ಹುಟ್ಟು ಹಾಕಿದ "ಅಭಿಮತ"ದ ಪ್ರಥಮ ರೂವಾರಿ, ಶ್ರೀ ಎನ್.ಪಿ. ಭಟ್ಟರು ನಮ್ಮೊಡನೆ ಭೌತಿಕವಾಗಿ ಇಲ್ಲ. ಕೊನೆಯ ಉಸಿರು ನಿಲ್ಲುವ ಮೂರು ನಾಲ್ಕು ಗಂಟೆಗಳ ಮುನ್ನವೂ ಪ್ರೀತಿಯ ಮಡದಿಯಿಂದ ಕನ್ನಡದ ಲೇಖನವನ್ನು ಓದಿಸಿ ಕೇಳಿ ಆನಂದಿಸಿದ ಶ್ರೀ ಭಟ್ಟರು ನಿಜವಾಗಿಯೂ, ಓದದೇ-ಕೇಳದೇ ತನ್ನ ಬೆಳವಣಿಗೆ ಕುಂಠಿತವಾಗುತ್ತದೆ ಎಂದು ತಪತಪಿಸಿದ ವ್ಯಕ್ತಿ, ಇಂದಿನ ಬೆಳೆಯುತ್ತಿರುವ ಯುವ ಪೀಳಿಗೆಗೆ ಆದರ್ಶಪ್ರಾಯರು. ಸ್ವತಃ ಆದರ್ಶವಾದಿಗಳಾದ, ಪ್ರಾಮಾಣಿಕತೆಯ ಪ್ರತಿಬಿಂಬವಾದ, ಭಾರತ ಸರ್ಕಾರದ ವರಿಷ್ಠ ಅಧಿಕಾರಿಯಾಗಿ ಸೇವೆ ಸಲ್ಲಿಸಿದ, ನಿಷ್ಠ ಹಾಗೂ ದಿಟ್ಟ ಅಧಿಕಾರಿಯೆಂದು ಅಧಿಕಾರಿ ವರ್ಗಗಳ ಜಾಲದಲ್ಲಿ ಎಲ್ಲರೂ ಒಪ್ಪಿಕೊಳ್ಳುತ್ತಿದ್ದ ಶ್ರೀ ಭಟ್ಟರನ್ನು ಅವರು ಸಲ್ಲಿಸಿದ ಸೇವೆಗಳಿಗೆ ಭಾರತ ಸರ್ಕಾರ ಸಹ ಸ್ಮರಿಸಿಕೊಳ್ಳಬೇಕು.

ಶ್ರೀ ಎನ್.ಪಿ. ಭಟ್ಟರೊಂದಿಗೆ ನನ್ನ ಭೇಟಿ ಕಳೆದ ಶತಮಾನದ ಎಂಭತ್ತರ ದಶಕದ ಪ್ರಾರಂಭದಲ್ಲಿ ಆದದ್ದು. ಅವರ ಮಿತ್ರ ಡಾ. ಪ್ರಕಾಶ ಭಾರದ್ವಾಜರ ಮನೆಯಲ್ಲಿನ ಪೂಜಾ ಸಮಾರಂಭದ ವೇಳೆಯಲ್ಲಿ. ಪ್ರಕೃತಿಯ ವೈಚಿತ್ರವೋ ಏನೋ ಡಾ. ಭಾರದ್ವಾಜರೂ ಸಹ ಭಟ್ಟರ ಸಾವಿನ ಒಡನೆ ಅದೇ ವಾರದಲ್ಲಿ ದೈವಾಧೀನರಾದರು. ದೆಹಲಿಯ ಖ್ಯಾತ ಸಫ್ದರ್‌ಜಂಗ್ ಆಸ್ಪತ್ರೆಯಲ್ಲಿ, ಡಾ. ಭಾರದ್ವಾಜರು ಮೆಡಿಕಲ್ ಸೂಪರಿಂಟೆಂಡೆಂಟ್ ಆಗಿ ಸೇವೆ ಸಲ್ಲಿಸಿದವರು. ಅವರ ಮನೆ ಯಾವಾಗಲೂ ಆಧ್ಯಾತ್ಮಿಕ ರುಚಿ ಉಳ್ಳ ಸಮಾಜದ ಹಿರಿಯ-ಕಿರಿಯ ವ್ಯಕ್ತಿಗಳಿಂದ ತುಂಬಿರುತ್ತಿತ್ತು. ನಾನು ದೆಹಲಿ ಕರ್ನಾಟಕ ಸಂಘಕ್ಕೆ ಕಾಲಿಡುವ ಮುನ್ನ ಭಟ್ಟರೊಡನೆ ಒಂದು ದಶಕದ ಸಂಪರ್ಕವಿತ್ತು.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ಪಡೆದ ಶ್ರೀ ಭಟ್ಟರಿಗೆ ದೇಶದ ಬಹುಭಾಷೆಗಳ ಸಾಹಿತಿಗಳ ಸಂಪರ್ಕವಿತ್ತು. ದೆಹಲಿ ಕರ್ನಾಟಕ ಸಂಘ ಅವರ ನೇತೃತ್ವದಲ್ಲಿ ಮಧ್ಯ ಪ್ರಾಚೀನ ಸಾಹಿತ್ಯದ (ಕನ್ನಡದ) ಸಮ್ಮೇಳನವನ್ನೂ ಮಾಡಿದಾಗ, ಅವರ ವ್ಯಕ್ತಿಗತ ವರ್ಚಸ್ಸಿನಿಂದ, ರಾಷ್ಟ್ರದ ನಾಲ್ಕು ಜ್ಞಾನಪೀಠ ಪ್ರಶಸ್ತಿ ವಿಜೇತರನ್ನೂ ಒಟ್ಟಾಗಿ ಕನ್ನಡ ಸಂಘದ ವೇದಿಕೆಗೆ ಕರೆ ತಂದರು. ಅಂದಿನ ಎರಡು ದಿನಗಳ ಸಮ್ಮೇಳನ, ನಡೆದ ಚಟುವಟಿಕೆಗಳು, ಮಂಡಿಸಿದ ಪ್ರಬಂಧಗಳು, ಕನ್ನಡದ ನುಡಿಯ ಎತ್ತರವನ್ನು ರಾಷ್ಟ್ರದ ರಾಜಧಾನಿಯಲ್ಲಿ ಹೆಚ್ಚಿಸಿತು. ಅವರೊಡನೆ ಜೊತೆಗೂಡಿ ಕೆಲಸ ಮಾಡಿದ ಡಾ. ಟಿ.ಎಸ್. ಸತ್ಯನಾಥ್ ಅವರನ್ನೂ ಸಹ ನಾನು ಇಲ್ಲಿ ನೆನಪಿಸಿಕೊಳ್ಳುತ್ತೇನೆ.


ದೆಹಲಿಯ ಕರ್ನಾಟಕ ಸಂಘಕ್ಕೆ ನನ್ನನ್ನು ಕರತಂದವನು ಬಾಲ್ಯ ಕಾಲದ ನನ್ನ ಮಿತ್ರ ದಿವಂಗತ ಕೆ.ಆರ್. ನಾಗರಾಜ. ನನ್ನನ್ನೂ ಸಂಘದ ಕಾರ್ಯದರ್ಶಿಯನ್ನಾಗಿ ಮಾಡಿದವನೂ ಸಹ ನಾಗರಾಜನೇ. ಶ್ರೀ ಭಟ್ಟರು ಸಂಘದ ಅಧ್ಯಕ್ಷರಾದಾಗ ಆಧ್ಯಾತ್ಮಿಕ ವಲಯಕ್ಕೆ ಸೀಮಿತವಾಗಿದ್ದ ನನ್ನ ಮತ್ತು ಭಟ್ಟರ ಸ್ನೇಹ-ಒಡನಾಟ ಅದರ ಪರಿಧಿಯನ್ನೂ ವಿಸ್ತರಿಸಿತು. ಸವಿಮಾತುಗಳಿಂದ ಜನರನ್ನು ಗೆಲ್ಲುವ, ಒಲಿಸಿಕೊಳ್ಳುವ ಅವರ ವಿಶೇಷ ಶಕ್ತಿಗೆ ನಾನು ಬೆರಗಾದೆ. ಅವರಿಂದ ಜೀವನದ ಅನೇಕ ಪಾಠಗಳನ್ನು ನಾನು ಕಲಿತೆ.

ಸಂಘದ ಆರ್ಥಿಕ ಪರಿಸ್ಥಿತಿ ಏನೂ ಚೆನ್ನಾಗಿಲ್ಲದಿದ್ದಾಗ ಅಧ್ಯಕ್ಷರಾದ ಶ್ರೀ ಭಟ್ಟರು ಪರಿಸ್ಥಿತಿಯನ್ನು ಸುಧಾರಿಸಿ ಹದಿನಾರುವರೆ ಲಕ್ಷ ರೂಗಳನ್ನು ಉಳಿಸಿ ಸಂಘದ ಲೆಕ್ಕದಲ್ಲಿಟ್ಟರು. ಪ್ರತಿ ಹತ್ತು ದಿನಕ್ಕೊಮ್ಮೆ ಕಾರ್ಯಕ್ರಮಗಳನ್ನು ನಡೆಸಿದರು. ಸಾಹಿತ್ಯ, ಸಂಗೀತ, ನಾಟಕ ಮತ್ತು ಕಲೆಗಳ ಕ್ಷೇತ್ರಗಳನ್ನು ಸಂಘವನ್ನು ಮುಂಚೂಣಿಗೆ ತಂದರು. ಅವರು ಮಾಡಿದ ಕಾರ್ಯಗಳನ್ನು ಗಮನಿಸಿದರೆ, ಅವರೇ ಮುನ್ನುಗ್ಗಿ, ಮುಂದೆ ನಿಂತು "ನೋಡಿ ಇದು ನನ್ನಿಂದಾಯಿತು, ನಾನಿಲ್ಲದಿದ್ದರೆ ಇದು ಎಂದೂ ನಡೆಯುತ್ತಿರಲಿಲ್ಲ" ಎಂಬ ತನ್ನ ಸ್ವಪ್ರತಿಷ್ಠೆಯನ್ನು ಬೆಳಗುವ ಕಾರ್ಯವನ್ನು ಭಟ್ಟರು ಎಂದೂ ಮಾಡಲಿಲ್ಲ. ಹಣ ಸಂಗ್ರಹಣೆ ಮಾಡುವಾಗ ಸಹ, ನಿಃಶಬ್ದವಾಗಿ ಮಾಡಿದರು. ಹೆಸರಾಂತ ನಾಟಕ ತಂಡಗಳನ್ನೂ ಸಂಘಕ್ಕೆ ಕರೆಸಿಕೊಂಡರು.

ಶ್ರೀ ಭಟ್ಟರಿಗೆ ಸಂಗೀತದಲ್ಲಿ ಬಹಳ ಅಭಿರುಚಿ. ಹಿಂದೂಸ್ಥಾನಿ ಸಂಗೀತದ ದಿಗ್ಗಜರಾದ ಕುಮಾರ ಗಂಧರ್ವ, ಗಂಗೂಬಾಯಿ ಹಾನಗಲ್ಲರಂತಹ ಸಂಗೀತಕಾರರು, ವೀಣೆ ದೊರೆಸ್ವಾಮಿ ಐಯ್ಯಂಗಾರರು, ವಿಜ್ಞಾನಿಗಳಾದ ಡಾ. ರಾಜಾರಾಮಣ್ಣನವರು, ಶಿವರಾಮ ಕಾರಂತರು ಮುಂತಾದ ಅನೇಕಾನೇಕ ಗಣ್ಯವ್ಯಕ್ತಿಗಳು, ಸಂಘಕ್ಕೆ ಬಂದು ಸಮಾರಂಭಗಳಲ್ಲಿ ಪಾಲ್ಗೊಂಡರು. ಇಲ್ಲಿ ಒಂದು ಘಟನೆಯನ್ನು ನಾನು ಉಲ್ಲೇಖಿಸಬೇಕು. ದೆಹಲಿಯ ಕೋಪರ್‌ನಿಕಸ್ ಮಾರ್ಗದ ಲಿಟಲ್‌ಗ್ರೂಪ್ ಥಿಯೇಟರ್‌ನಲ್ಲಿ ನಡೆದ ಗಂಗೂಬಾಯಿ ಹಾನಗಲ್ ಅವರ ಸಂಗೀತದ ಕಾರ್ಯಕ್ರಮ. ಅಂದು ಕೆಲಸದ ದಿನವಾದ್ದರಿಂದ, ಸಭಿಕರು ಕಡಿಮೆ ಇದ್ದರು. ಗಂಗೂಬಾಯಿ ಅವರಿಗೆ ಜನಸಂದಣಿ ಕಾಣದೆ ನಿರಾಶೆಯಾಗಿತ್ತು. ಪ್ರಾರಂಭ ಮಾಡೋಣ, ಜನ ಬಂದು ಸೇರುತ್ತಾರೆ ಎಂದರು ಭಟ್ಟರು. ನನ್ನನ್ನು ಕರೆದು, ಸಭಾಂಗಣದ ಹಿಂಭಾಗದ ಕುರ್ಚಿಗಳ ಮೇಲೆ ಬೀಳುವ ಬೆಳಕನ್ನು ಆರಿಸಿ ಎಂದರು. ನನ್ನೊಡನೆ ಐದಾರು ಮಂದಿಯನ್ನು ಹಿಂದಿನ ಜಾಗಗಳಲ್ಲಿ ಕೂರಲು ಹೇಳಿ ನನಗೆ ಕಿವಿ ಮಾತೊಂದನ್ನೂ ಹೇಳಿದರು. ಸಂಪ್ರದಾಯದ ಸ್ವಾಗತ ಇತ್ಯಾದಿ ಚಟುವಟಿಕೆಗಳು ಮುಗಿದ ನಂತರ ಸಂಗೀತ ಕಚೇರಿ ಪ್ರಾರಂಭವಾಯಿತು. ತಂಬೂರಿಯವರು ಶೃತಿ ಹಿಡಿದರು. ಸಭಾಂಗಣದ ಹಿಂಭಾಗದಲ್ಲಿ ಕತ್ತಲೆ ಆವರಿಸಿತ್ತು. ಗಂಗೂಬಾಯಿ ಅವರು ತಮ್ಮ ಕೈಯನ್ನು ಹಣೆಯ ಬಳಿ ಅಡ್ಡ ಹಿಡಿದು, ಕಣ್ಣುಗಳನ್ನು ಹಿಂಡಿ ಸಭಿಕರನ್ನು ನೋಡಿದರು. ಅವರಿಗೆ ಹಿಂಬದಿಯ ಕತ್ತಲಿಂದ ಯಾರೂ ಕಾಣಲಿಲ್ಲ. ಆಕೆ ತನ್ನ ದನಿ ಎತ್ತಿ "ಹಿಂದೆ ಎಲ್ಲೀನ್ ತನಕ ಕುಂದ್ರಿದೀರಪ್ಪಾ?" ಎಂದು ಕೇಳಿದರು. ಹಿಂದೆ ಕತ್ತಲಲ್ಲಿ ಕುಳಿತಿದ್ದ ನಾವು ಐದಾರು ಮಂದಿ ಒಮ್ಮೆಗೆ ಒಕ್ಕೊರಿನಲ್ಲಿ "ಕಡೀತನಕ" ಅಂತ ಕೂಗಿದವು. ಆಕೆಗೆ ಬಹಳ ಸಂತೋಷವಾಯಿತು. ಸಂಗೀತಕ್ಕೆ ಮೆರಗು ಬಂತು. ಕಚೇರಿ ಕಳೆ ಕಟ್ಟಿತು. ಭಟ್ಟರ ಸಮಯ ಪ್ರಜ್ಞೆಗೆ ಸಾವಿರ ಸಲಾಮುಗಳು.

ಶ್ರೀ ಭಟ್ಟರು ದೆಹಲಿ ಕರ್ನಾಟಕ ಸಂಘಕ್ಕೆ ಕೊಟ್ಟವರೆ ವಿನಃ ಸಂಘದಿಂದ ಏನನ್ನೂ ತೆಗೆದುಕೊಂಡವರಲ್ಲ. ಕೆಲವು ಸದಸ್ಯರು ಕಾರ್ಯಕಾರಿ ಸಮಿತಿಯ ಸಭೆಗೆ ಬಂದರೆ, ಟ್ಯಾಕ್ಸಿ ಬಾಡಿಗೆ ಕೊಡಿ ಎಂದು ಕೇಳುತ್ತಿದ್ದರು. ಭಟ್ಟರು ತಮ್ಮ ಕಣ್ಣುಗಳ ಸಮಸ್ಯೆಯಿಂದಾಗಿ ತಾನೇ ವಾಹನವನ್ನು ನಡೆಸುತ್ತಿರಲಿಲ್ಲ. ದೆಹಲಿಯಲ್ಲಿ ಬಹಳ ಉನ್ನತ ಪದವಿಯಲ್ಲಿ, ಅದೂ ಸರ್ಕಾರದಲ್ಲಿ ಚೀಫ್ ಇನ್‌ಕಮ್‌ಟ್ಯಾಕ್ಸ್ ಕಮೀಷನರ್ ಆಗಿ ಕೆಲಸ ಮಾಡುತ್ತಿದ್ದಾಗ ಸಂಘಕ್ಕೆ ಬರಲು ಅಥವಾ ನಮ್ಮಗಳ ಮನೆಗೆ ಬರಲು ಸರ್ಕಾರಿ ಕಾರನ್ನೂ ಬಳಸುತ್ತಿರಲಿಲ್ಲ. ಸಂಘದ ಕೆಲಸ ಮುಗಿದ ನಂತರ ಡಿಸೆಂಬರ್ ಚಳಿಯಲ್ಲೂ, ತಲೆಗೆ ಮಫ್ಲರ್ ಸುತ್ತಿ, ಡಿಟಿಸಿ ಬಸ್ಸಿನಲ್ಲಿ ದೇವನಗರದ ಅವರ ಮನೆಗೆ ಹೋಗುತ್ತಿದ್ದರು. ಕೆಲವು ಜುಜುಬಿ ಪಿ.ಎ.ಗಳು ಸರ್ಕಾರಿ ವಾಹನಗಳನ್ನು ಸಂಘಕ್ಕೆ ತಂದು ನಿಲ್ಲಿಸಿ ಠೇಂಕಾರ ಮೆರೆದಿದ್ದನ್ನು ನಾನು ಕಣ್ಣಾರೆ ನೋಡಿದ್ದೇನೆ. ಕಾಯಾ-ವಾಚಾ-ಮನಸ ಅಥವಾ ಸರಳ ಭಾಷೆಯಲ್ಲಿ 'ನುಡಿದಂತೆ ನಡೆ' ಎನ್ನುವ ಉಕ್ತಿಗೆ ಭಟ್ಟರು ದೊಡ್ಡ ಉದಾಹರಣೆ. ಈ ನಿಟ್ಟಿನಲ್ಲಿ ಅವರು ನನಗೆ ಆದರ್ಶಪ್ರಾಯರು. 17ವರ್ಷಗಳ ಕಾಲ ಭಾರತ ಸರ್ಕಾರ ವೈಯಕ್ತಿಕವಾಗಿ ನನಗೆ ಹವಾನಿಯಂತ್ರಿತ ಕಾರು ಕೊಟ್ಟಿದ್ದರೂ ಸಹ, ನಾನು ಎಂದೂ ದುರುಪಯೋಗಪಡಿಸಿಕೊಳ್ಳಲಿಲ್ಲ. ಭಾರತೀಯ ವಿದ್ಯಾಭವನದಲ್ಲಿನ ನನ್ನ ಓದಿಗೆ ನಾನು ಆಟೋರಿಕ್ಷಾದಲ್ಲಿ ಹೋಗುತ್ತಿದ್ದೆ. ಇದು ನನಗೆ ಭಟ್ಟರು ಕಲಿಸಿದ ನಡೆ.

ಸುಲಲಿತವಾಗಿ ಎಲ್ಲೂ ತಡವರಿಸದೆ ಕನ್ನಡದಲ್ಲಿ ಸೊಗಸಾಗಿ ಮಾತಾಡುತ್ತಿದ್ದವರು ವಾಗ್ಮಿ ಭಟ್ಟರು. ಕನ್ನಡ ಸಾಹಿತ್ಯದ ಆಳ-ಅಳತೆಗಳನ್ನು ಬಲ್ಲವರು ಭಟ್ಟರು. ಭಾರತದ ಅನೇಕ ಭಾಷೆಗಳ ಸಾಹಿತಿಗಳನ್ನೂ ಬಲ್ಲವರಿದ್ದರು ಭಟ್ಟರು. ಶಿವರಾಮ ಕಾರಂತರೊಂದಿಗೆ ನನ್ನ ಸಣ್ಣ ಕಾರಿನಲ್ಲಿ ಕಾರಂತರನ್ನೂ ಭಟ್ಟರನ್ನೂ ಕುಳ್ಳಿರಿಸಿ, ಜೊತೆಜೊತೆಗೆ ಸಂಭಾಷಿಸಿದ್ದು, ಅವಿಸ್ಮರಣೀಯ. ಆ ಮೂರು ದಿನಗಳೂ ನನ್ನ ಭಾಗ್ಯದ ಬಾಗಿಲನ್ನು ತೆರೆದಿಟ್ಟವರು ಭಟ್ಟರು. ಈ ನನ್ನ ಅನುಭವಕ್ಕೆ ಭಟ್ಟರಿಗೆ ನಾನು ಋಣಿ. ಅವರ ಮನೆಯಲ್ಲಿ ನಾನು, ನನ್ನ ಮಡದಿ ಮಕ್ಕಳು ಬಹಳಷ್ಟು ದಿನ ಊಟ ಮಾಡಿದ್ದೇವೆ. ಆ ತಾಯಿ ಶ್ರೀಮತಿ ಯಶೋದಮ್ಮನವರಿಗೆ ನಾವು ಋಣಿ. ನನ್ನ ಮಗನನ್ನು ಕಂಡರೆ ಭಟ್ಟರಿಗೆ ಬಹಳ ಪ್ರೀತಿ. ಅವನನ್ನೂ ಬಾಳೆಹಣ್ಣ ಕೃಷ್ಣ ಎಂದು ಕರೆಯುತ್ತಿದ್ದರು. ಮಗನಿಗೆ ಬಾಳೆಹಣ್ಣು




**ಮಾಜಿ ರಾಷ್ಟ್ರಪತಿ ಗ್ಯಾನಿ ಜೈಲ್‌ಸಿಂಗ್ ಅವರಿಗೆ 'ಅಭಿಮತ' ಪತ್ರಿಕೆಯನ್ನು ನೀಡುತ್ತಿರುವ ಎನ್.ಪಿ. ಭಟ್, ಮಾಜಿ ಅಧ್ಯಕ್ಷರು ಮತ್ತು ಸಂಘದ ಅಂದಿನ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ವಿ. ಗೋಪಿನಾಥ್ ಅವರನ್ನು ಕಾಣಬಹುದು.**

ಕಂಡರೆ ಇಷ್ಟ. ಭಟ್ಟರ ಕುಟುಂಬದವರೊಡನೆ ನಾನು ಅವರ ಸುಖ-ದುಃಖಗಳಲ್ಲಿ ಭಾಗಿಯಾಗಿದ್ದೇನೆ. ಅವರ ಭಾವಂದಿರು ಶ್ರೀ ಅನಿಲ್ ಗೋಕಾಕ್ ಅವರು ನಮ್ಮ ವಿಭಾಗದ ಕಾರ್ಯದರ್ಶಿಯಾಗಿದ್ದವರು. ನಾನೊಮ್ಮೆ ನನ್ನ ಸರ್ಕಾರಿ ವೃತ್ತಿಯನ್ನು ಬಿಟ್ಟು ಮೈಸೂರಿಗೆ ತೆರಳಬೇಕೆಂದು ತಯಾರಿ ನಡೆಸುತ್ತಿದ್ದಾಗ ನನಗೆ ಬುದ್ಧಿವಾದವನ್ನೂ ಹೇಳಿ ನನ್ನನ್ನು ದೆಹಲಿಯಲ್ಲಿ ಉಳಿಸಿಕೊಂಡವರು ಅವರು. ಭಟ್ಟರ ಮೂಲಕ ನನಗೆ ಚಂದ್ರಶೇಖರ ಕಂಬಾರರು, ಕುರ್ತುಕೋಟಿ ಅವರು, ಸುಮತೀಂದ್ರ ನಾಡಿಗರು, ಗಿರಡ್ಡಿ ಗೋವಿಂದರಾಜರು, ಪಾಟೀಲ ಪುಟ್ಟಪ್ಪನವರು, ಭಾರತ ಸರ್ಕಾರದ ಅನೇಕ ಹಿರಿಯ ಅಧಿಕಾರಿಗಳು ಇವರೆಲ್ಲರ ಪರಿಚಯವಾಯಿತು.

ನನ್ನಲ್ಲಿ ಕಣ್ಣೀರು ಮೂಡಿಸಿದ ಒಂದು ಘಟನೆಯನ್ನು ನಾನು ಇಲ್ಲಿ ಹೇಳ ಬಯಸುತ್ತೇನೆ. ಭಟ್ಟರು ಧಾರವಾಡದಲ್ಲಿ ನೆಲೆಸಿದ ನಂತರ, ದೆಹಲಿಯ ಇನ್‌ಟ್ಯಾಕ್ ಸಂಸ್ಥೆಯ ಸಭೆಗೆ ಬಂದಿದ್ದರು. ನಮ್ಮ ಮನೆಯಲ್ಲಿ ಉಳಿದರು. ನಮ್ಮ ಮನೆಯ ಸಮೀಪದ ಇಂಡಿಯಾ ಇಂಟರ್‌ನ್ಯಾಷನಲ್ ಸೆಂಟರಿನಲ್ಲಿ ಸಭೆಯಿತ್ತು. ಮೊದಲ ದಿನ ನನ್ನ ಕಾರಿನಲ್ಲಿ ಅವರನ್ನು ಬಿಟ್ಟು ಬಂದೆ. ಎರಡನೆಯ ದಿನ ಯಾರೋ ಬಂದು, ಭಟ್ಟರನ್ನು ಕಾರಿನಲ್ಲಿ ಕರೆದೊಯ್ದರು. ರಾತ್ರಿ ಸಮೂಹ ಭೋಜನವಿದೆ, ಆದ್ದರಿಂದ ನಮ್ಮ ಮನೆಯಲ್ಲಿ ಅವರಿಗೆ ನಾವು ಊಟಕ್ಕೆ ಕಾಯಬಾರದು ಎಂದು ತಿಳಿಸಿದರು. ಭಟ್ಟರು ಲೋದಿ ಎಸ್ಟೇಟಿನ ನಮ್ಮ ಮನೆಗೆ ಬಹಳ ಬಾರಿ ಬಂದಿದ್ದರು. ದೆಹಲಿ ಕನ್ನಡ ಶಾಲೆಯ ಎದುರುಗೇಟಿನಿಂದ ಬರಬೇಕೆಂದೂ ಸಹ ಅವರಿಗೆ ತಿಳಿದಿತ್ತು.

ರಾತ್ರಿ ಒಂಭತ್ತು ಗಂಟೆಯ ತನಕ ಕಾದ ನಾವು, ಸ್ವಲ್ಪ ಸಮಯ ನಿದ್ದೆ ಮಾಡಿ ಹತ್ತು ಗಂಟೆಗೆ ಎದ್ದೆವು. ಅವರ ಬಳಿ ಮೊಬೈಲ್ ಫೋನ್ ಇರಲಿಲ್ಲ. ನಾನು ಗ್ಯಾರೇಜ್‌ನಿಂದ ಕಾರನ್ನು ತೆಗೆದು, ಹಿಂದಿನ ದಿನ ಅವರನ್ನು ಸಭೆಗೆ ಬಿಟ್ಟ ತಾಣಕ್ಕೆ ಹೋಗಿ ವಿಚಾರಿಸಿದೆ. ಅವರು ಇಂದು ಅವರ ಕಾರ್ಯಕ್ರಮ ಇಲ್ಲಿರಲಿಲ್ಲ, ಹಳೆಯ ದೆಹಲಿಯಲ್ಲಿ ಇತ್ತು ಎಂದರು. ವಿಳಾಸ ಅವರಿಗೆ ಗೊತ್ತಿರಲಿಲ್ಲ. ರಾತ್ರಿ 11ರ ಸಮೀಪವಾಯಿತು. ಸುತ್ತಮುತ್ತಲ ಎಲ್ಲಾ ರಸ್ತೆಗಳನ್ನೂ ಹುಡುಕಿದೆ. ಪ್ರಯೋಜನವಾಗಲಿಲ್ಲ. ವಾಪಸ್ಸು ಮನೆಗೆ ಬರುವಾಗ, ನಮ್ಮ ಲೋದಿ ಎಸ್ಟೇಟಿನ ಗಸ್ತಿನಲ್ಲಿದ್ದ ಪೋಲೀಸಿನವರಿಗೆ ವಿಷಯ ತಿಳಿಸಿ ಭಟ್ಟರ ಚಹರೆ ವರ್ಣಿಸಿದೆ. ಮನೆಗೆ ಬಂದೆ. ಕಣ್ಣೀರು ಚಿಮ್ಮಿತು. ನಿದ್ದೆ ಬಾರದು. ಹನ್ನೆರಡಾಯಿತು. ಅವರ ಭಾವಂದಿರಾದ ಶ್ರೀ ಅನಿಲ್ ಗೋಕಾಕರಿಗೆ ವಿಷಯ ತಿಳಿಸೋಣವೆಂದು ಫೋನ್ ಎತ್ತಿದೆ. ನಮ್ಮ ಮನೆಯ ಗೇಟಿನ ಬಾಗಿಲಿನ ಶಬ್ದವಾಯಿತು. ದೀಪ ಹಾಕಿ ಬಾಗಿಲು ತೆಗೆದೆ. ಪೋಲೀಸ್‌ನವ ಕಂಡು, ಜೊತೆಯಲ್ಲಿ ತಲೆಗೆ ಮಫ್ಲರ್ ಸುತ್ತಿದ ಭಟ್ಟರು ಡಿಸೆಂಬರ್ ಮಾಹೆ ಬೇರೆ, ಹೋಗಿ ಭಟ್ಟರನ್ನು ಬಾಚಿ ತಬ್ಬಿಕೊಂಡೆ.

ಭಟ್ಟರನ್ನು ಏನಾಯಿತೆಂದು ವಿಚಾರಿಸಿದೆ. ದೆಹಲಿ ಕನ್ನಡ ಶಾಲೆಯ ಎದುರಿನ ನಮ್ಮ ಮನೆಗೆ ಬರುವ ಗೇಟ್ ರಾತ್ರಿ ಹತ್ತಕ್ಕೆ ಹಾಕುತ್ತಾರೆ. ತದನಂತರ ಬರುವವರು ಅಲ್ಲಿಂದ 300 ಅಡಿ ನಡೆದು ಮೂರನೇ ಗೇಟಿನಿಂದ ಬಳಿ ಬಂದು, ಒಳಗೊಳಗೆ ವಾಪಸ್ಸು ಬಂದು ನಮ್ಮ ಮನೆಗೆ ಬರಬೇಕು. ರಾತ್ರಿ ಹತ್ತೂಕಾಲಿಗೆ ಕಾರಿನಿಂದ ಇಳಿದ ಭಟ್ಟರು, ಬೀಗ ಜಡಿದ ಗೇಟ್ ನೋಡಿ ದಿಗ್ಭ್ರಮೆಗೊಂಡರು. ಅಲ್ಲಿ ಇಲ್ಲಿ ವಿಚಾರಿಸುತ್ತಾ ಮೂರನೆಗೇಟಿನಿಂದ ಒಳ ಬಂದರು. ನಮ್ಮ ಮನೆಯ ನಂಬರ್ ಮರೆತು ಹೋಯಿತು. ಅಲ್ಲಿರುವ ಎಲ್ಲ ಮನೆಗಳೂ ಒಂದೇ ಬಗೆಯಾಗಿದ್ದು, ಮನೆ ಯಾವುದೆಂದು ತಿಳಿಯಲಿಲ್ಲ. ಚಳಿಯಲ್ಲಿ ನಡುಗುತ್ತಾ, ಸಿಕ್ಕಿದ ಒಂದಿಬ್ಬರನ್ನು ನನ್ನ ಹೆಸರು ಹೇಳಿ ದಾರಿ ತೋರಿಸಿ ಎಂದಾಗ ವಿಫಲರಾದರು.


ಹಾಗೆ ಸುತ್ತುತ್ತಿರಬೇಕಾದರೆ ಒಂದು ಮನೆಯ ಮಹಡಿ ಕೆಳಗೆ ಧೋಬಿಯೊಬ್ಬ ಬೆಂಕಿ ಕಾಯಿಸುತ್ತಿದ್ದವನನ್ನು ಕಂಡು ವಿಚಾರಿಸಿದರು. ಅವನು ತನಗೆ ಗೊತ್ತಿಲ್ಲವೆಂದು ತಿಳಿಸಿ, ಇನ್ನು ಸುತ್ತಬೇಡಿ, ಚಳಿಯಲ್ಲಿ ಮೈ ಮರಗಟ್ಟಿ ಹೋಗುತ್ತದೆ. ಬೆಂಕಿ ಕಾಯಿಸಿ ಕುಳ್ಳಿರಿ, ಬೆಳಗಾದ ಮೇಲೆ ಹುಡುಕೋಣ ಎಂದ. ಮಾತುಗಾರರಾದ ಭಟ್ಟರು ಅವರೊಡನೆ ಬೆಂಕಿ ಕಾಯಿಸುತ್ತಾ ಮಾತನಾಡುತ್ತಾ ಕುಳಿತರು. ರಾತ್ರಿ ಹನ್ನೆರಡರ *ಗಸ್ತಿಗೆ ಪೋಲೀಸರು ಕಾಂಪೌಂಡ್ ಬಳಿಗೆ ಬಂದಾಗ, ಇವರನ್ನು ನೋಡಿ ಮಾತನಾಡಿಸಿ ನಮ್ಮ ಮನೆಗೆ ಕರೆತಂದರು. ಇದಾದ ಬಹಳ ದಿನಗಳ ನಂತರೂ ಈ ಘಟನೆಯನ್ನು ನೆನಪಿಸಿ ನಾವು ನಕ್ಕಿದ್ದುಂಟು.*

ಸರಳತೆ, ಮುಗ್ಧತೆ ಭಟ್ಟರ ವಿಶೇಷ ಗುಣಗಳು. ಅವರ ಮಡದಿ, ಸೊಸೆ ಸುಮಂಗಲ ಎಲ್ಲರೂ ಉತ್ಸಾಹದ ಚಿಲುಮೆಗಳು. ಇನ್‌ಟ್ಯಾಕ್ ಮೂಲಕ, ಧಾರವಾಡದಲ್ಲಿ ಅವರು ಸೃಜಿಸಿದ ವಸ್ತು ಸಂಗ್ರಹಾಲಯ, ಸಾಹಿತ್ಯ ಚಟುವಟಿಕೆಗಳನ್ನು ನಿರಂತರವಾಗಿ, ಅವರ ಮಗನ ಸ್ಮೃತಿಯಲ್ಲಿ ಕಟ್ಟಿದ 'ಅವನೀ ಕೇಂದ್ರ' ಇವುಗಳು ಇನ್ನೂ ಹಚ್ಚ ಹಸಿರಾಗಿದೆ.

ಭಟ್ಟರು ಸದಾ ಸ್ಮರಣೀಯರು. ಅವರ ಆತ್ಮಕ್ಕೆ ಶಾಂತಿ ದೊರಕಲೆಂದು, ನಾನು ನಂಬುವ ಆ ಭಗವಂತನನ್ನು ಕೇಳಿಕೊಳ್ಳುತ್ತೇನೆ.

***ಸಿ.ವಿ. ಗೋಪಿನಾಥ್***

# ಅವನೀಂದ್ರನಾಥ್ ರಾವ್ ಅವರ 'ಒಲಿಂಪಿಕ್ ಚರಿತೆ' ಕೃತಿ ಬಿಡುಗಡೆ




ಗಿನ್ನೆಸ್ ದಾಖಲೆಯ ಈಜುಪಟು ಗೋಪಾಲ್ ಖಾರ್ವಿ ಅವರು ಡಾ. ಅವನೀಂದ್ರನಾಥ್ ರಾವ್ ಅವರ 'ಒಲಂಪಿಕ್ ಚರಿತೆ' ಕೃತಿ ಬಿಡುಗಡೆಗೊಳಿಸಿದರು.

ದೆಹಲಿಯ ಕೇಂದ್ರ ಸಚಿವಾಲಯ ಗ್ರಂಥಾಲಯದ ಅಧಿಕಾರಿ, ಸಾಹಿತಿ ಡಾ. ಅವನೀಂದ್ರನಾಥ್ ರಾವ್ ಅವರ 'ಒಲಿಂಪಿಕ್ ಚರಿತೆ' ಕೃತಿ ದಿನಾಂಕ 27.12.2019ರಂದು ಉಡುಪಿ ಜಿಲ್ಲೆಯ ಉಚ್ಚಿಲದಲ್ಲಿ ಬಿಡುಗಡೆಗೊಂಡಿತು.

ಶಿವಲೋಚನ ಸಾಂಸ್ಕೃತಿಕ ವೇದಿಕೆಯ ಆಶ್ರಯದಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಗಿನ್ನೆಸ್ ದಾಖಲೆಯ ಈಜುಪಟು ಗೋಪಾಲ್ ಖಾರ್ವಿ ಕೃತಿ ಅನಾವರಣಗೊಳಿಸಿದರು. ಈ ಫಳಿಗೆ ಕ್ರೀಡಾಳುಗಳಿಗೆ ಮತ್ತು ಕ್ರೀಡಾಲೋಕಕ್ಕೆ ಸಂದ ಗೌರವ ಎಂದವರು ಹರ್ಷ ವ್ಯಕ್ತಪಡಿಸಿದರು.

ಸಮಾರಂಭದ ಮುಖ್ಯ ಅತಿಥಿ ಕನ್ನಡ ಸಾಹಿತ್ಯ ಪರಿಷತ್ತು ಕಾಪು ತಾಲೂಕು ಘಟಕದ ಅಧ್ಯಕ್ಷ ಬಿ. ಪುಂಡಲೀಕ ಮರಾಠೆ ಅವರು ಮಾತನಾಡಿ, ಲೇಖಕರಿಗೆ ಅಳಿವಿದ್ದರೂ ಲೇಖನಿಗೆ ಅಳಿವಿಲ್ಲ. ಕ್ರೀಡಾ ಸಾಹಿತ್ಯ ಕೃತಿಗಳು ತುಂಬಾ ವಿರಳ. 'ಒಲಿಂಪಿಕ್ ಚರಿತೆ'ಯಂತಹ ಕೃತಿಗಳು ಮುಂದೆ ಜನರ ಆಸ್ತಿಯಾಗಬಲ್ಲದು ಎಂದು ಅಭಿಪ್ರಾಯಪಟ್ಟರು. ಮುಂದಿನ ಸಾಹಿತ್ಯ ಸಮಾವೇಶಗಳಲ್ಲಿ ಕ್ರೀಡಾ ಸಾಹಿತ್ಯ ಕುರಿತ ಚಿಂತನ ಗೋಷ್ಠಿ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಕೃತಿ ಚಿಂತಕ ಕೆ.ಎಲ್. ಕುಂಡಂತಾಯ ಅವರು ಮಾತನಾಡಿ, ಹಿಂದೆ ಧಾರ್ಮಿಕ ಉತ್ಸವಗಳಲ್ಲಿ ಕ್ರೀಡಾ ಸ್ಪರ್ಧೆಗಳಿಗೆ ಮಹತ್ವವಿತ್ತು. ಅವನೀಂದ್ರರ 'ಒಲಿಂಪಿಕ್ ಚರಿತೆ' ಕೃತಿ ಪುರಾತನ ಪಂದ್ಯಾವಳಿಯ ಅವಲೋಕನವಾಗಿದೆ. ಪುರಾತನವಾದದ್ದನ್ನು ಉಳಿಸಿ ದಾಖಲಿಸುವುದು ಸಂಸ್ಕೃತಿಯ ಸಂರಕ್ಷಣೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ ಎಂದರು. ಎಲ್ಲೂರು ವಿಶಿಷ್ಟ ಸಂಸ್ಕೃತಿಗಳ ಬೇರು. ಇಲ್ಲಿನ ಅವನೀಂದ್ರರಿಂದ ಇನ್ನಷ್ಟು ಮೌಲಿಕ ಕೃತಿಗಳು ಬರಲಿ ಎಂದು ಅವರು ಆಶಿಸಿದರು.

ಲೇಖಕ ಅವನೀಂದ್ರನಾಥ್ ರಾವ್ ಮಾತನಾಡಿ, ವ್ಯಕ್ತಿತ್ವ ವಿಕಸನಕ್ಕೆ ಕ್ರೀಡೆಗಳು ಮುಖ್ಯ. ಇದರಿಂದಾಗಿ ಐತಿಹಾಸಿಕ ಹಿನ್ನಲೆ ಇರುವ, ಆಸಕ್ತಿದಾಯಕ 'ಒಲಿಂಪಿಕ್ ಚರಿತೆ' ಬರೆಯಲು ಪ್ರೇರಣೆ ದೊರಕಿದೆ ಎಂದು ತಿಳಿಸಿದರು. ಖ್ಯಾತ ವಿದ್ವಾಂಸ ಡಾ.ವಿವೇಕ ರೈ ಕೃತಿಗೆ ಮುನ್ನುಡಿ ಬರೆದಿದ್ದು, ಬೆಂಗಳೂರಿನ ನಿವೇದಿತಾ ಪ್ರಕಾಶನ ಪ್ರಕಟಿಸಿದೆ.

ಇದೇ ಸಂದರ್ಭದಲ್ಲಿ ಲೇಖಕರ ಹೆತ್ತವರಾದ ದಿ. ಎಲ್ಲೂರು ಸದಾಶಿವ ರಾವ್ ಮತ್ತು ದಿ. ಸುಲೋಚನಾ ದೇವಿ ನೆನಪಿನಲ್ಲಿ ಶಿವಲೋಚನಾ ಸಾಂಸ್ಕೃತಿಕ ವೇದಿಕೆಯ ಚಟುವಟಿಕೆಗಳಿಗೆ ಚಾಲನೆ ನೀಡಲಾಯಿತು.

ವೇದಿಕೆಯ ಗೌರವಾಧ್ಯಕ್ಷ ಡಾ. ವೈ. ರವೀಂದ್ರನಾಥ್ ರಾವ್, ಮುದ್ದಣ ಪ್ರಕಾಶನದ ನಿರ್ದೇಶಕ ನಂದಳಿಕೆ ಬಾಲಚಂದ್ರ ರಾವ್, ಗೋವಾ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕ ಡಾ. ವಿನಯ್ ಕುಮಾರ್, ಯೋಗಪಟು, ಶಿಕ್ಷಕ ಭುವನೇಂದ್ರ ರಾವ್, ನ್ಯಾಯವಾದಿ ಎಂ. ದೇಜಪ್ಪ, ಮಹಾಲಿಂಗೇಶ್ವರ ದೇವಳದ ಪ್ರಧಾನ ಅರ್ಚಕ ಯು. ಸೀತಾರಾಮ್ ಭಟ್, ಆಯುರ್ವೇದ ತಜ್ಞ ಡಾ. ವಿವೇಕಾನಂದ ಶರ್ಮ, ನಿವೃತ್ತ ಅಭಿಯಂತರ ಶಾಂತಿನಾಥ ರಾವ್, ಉಪನ್ಯಾಸಕಿ ಶ್ರೀಮತಿ ಜ್ಯೋತಿ ಎಂ. ಅಲ್ಫೋನ್ಸ ಮೊದಲಾದವರು ಉಪಸ್ಥಿತರಿದ್ದರು. ಶಿವಲೋಚನ ವೇದಿಕೆಯ ಕಾರ್ಯದರ್ಶಿ ವೈ. ಜ್ಯೋತೀಂದ್ರನಾಥ್ ರಾವ್ ವಂದಿಸಿದರು. ರಂಗಕರ್ಮಿ ಗಣೇಶ್ ರಾವ್ ಎಲ್ಲೂರು ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು.




# ಸಂಸ್ಕೃತಿ ಚಿಂತನೆಯ ದೃಷ್ಟಿಯಿಂದ ಮುಖ್ಯ

ಡಾ. ವೈ. ಅವನೀಂದ್ರನಾಥ್ ರಾವ್ ಕ್ರೀಡೆ, ಕನ್ನಡ, ಬಾನುಲಿ, ಗ್ರಂಥಾಲಯಗಳ ಜೊತೆಗೆ ಆಡುತ್ತಾ ಓಡುತ್ತಾ ತಮ್ಮ ಅಚ್ಚುಕಟ್ಟು, ವಿನಯ, ಸಂಘಟನೆ ಮತ್ತು ಪ್ರೀತಿಯಿಂದ ಅವನಿಯಲ್ಲಿ ಎಲ್ಲರಿಗೂ ಕುಟುಂಬಿಕರಾದವರು. ತಮ್ಮ ಮೃಧುಮಧುರ ನಡೆ ನುಡಿಗಳಂತೆಯೇ ತಮ್ಮ ಬರವಣಿಗೆಯಲ್ಲೂ ಚೊಕ್ಕಟತನವನ್ನು ಪ್ರಕಟಿಸಿದವರು. ಸಮಯ ಸಂದರ್ಭ, ಭೂಮಿಗಾನ ಆಕಾಶಯಾನ, ಸಂಸ್ಕೃತಿ ಸಂವೇದ, ದೆಹಲಿಯ ಕನ್ನಡ ಜಗತ್ತಿನಲ್ಲಿ ಎಂಬ ಕೃತಿಗಳಲ್ಲಿ ಅವರ ಭಾಷೆಭಾವಗಳ ನವುರು ನಮ್ಯತೆ ಆಪ್ತತೆ ಅಧಿಕೃತತೆ ಢಾಳಾಗಿ ಕಾಣಿಸುತ್ತದೆ. 'ಕಿರಿದರೊಳ್ ಪಿರಿದರ್ಥ'ವನ್ನು ಹೇಳುವ ಕಲೆಗಾರಿಕೆ ಅವನೀಂದ್ರನಾಥ್ ಅವರಿಗೆ ಸಿದ್ಧಿಸಿದೆ .

ಈ ಎಲ್ಲ ಗುಣಗಳ ಅಡಕಸಂಚಯವಾಗಿ ಅವರ 'ಒಲಿಂಪಿಕ್ ಚರಿತೆ' ಎಂಬ ಈ ಪುಟ್ಟ ಕೃತಿ ಮೂಡಿಬಂದಿದೆ . ಸುಮಾರು 120 ವರ್ಷಗಳ ಹಿಂದೆ ಗ್ರೀಸ್‌ನ ಅಥೆನ್ಸ್‌ನಲ್ಲಿ ಆರಂಭವಾದ ಒಲಿಂಪಿಕ್ಸ್ ನ ಚರಿತ್ರೆಯನ್ನು ಅಂಗೈಯಲ್ಲಿ ಅರಮನೆ ತೋರಿಸುವಂತೆ ಅದರ ಪ್ರಮುಖ ಮಾಹಿತಿಗಳ ಜೊತೆಗೆ ಭಾರತದ ಒಳಗೊಳ್ಳುವಿಕೆಯನ್ನು ಇಲ್ಲಿ ಅನಾವರಣ ಮಾಡಲಾಗಿದೆ. 'ಒಲಿಂಪಿಕ್ಸ್ ಬೆಳೆದು ಬಂದ ಬಗೆ'ಯಲ್ಲಿ ಗ್ರೀಕಿನ ಎಳೆಯ ಚಿಣ್ಣರು ಆಟೋಟಗಳಲ್ಲಿ ತೋರಿಸುವ ಆಸಕ್ತಿ, ಗಾಳಿಪಟ ಸ್ಪರ್ಧೆಯ ದೇಸಿ ಚಿತ್ರಣ, ರೂಸೋ ತತ್ವಜ್ಞಾನಿ ಶಾರೀರಿಕ ಚಟುವಟಿಕೆಗಳ ಸ್ವಾತಂತ್ರ್ಯದ ಬಗ್ಗೆ ತಾಳಿದ ನಿಲುವು, ರೂಸೋವಿನಿಂದ ಪ್ರಭಾವಿತನಾದ ಕೂಬರ್ತಿಯ ಸಾಹಸದ ಉಪಕ್ರಮ-ಈ ಸಂಗತಿಗಳು ಸಂಸ್ಕೃತಿ ಚಿಂತನೆಯ ದೃಷ್ಟಿಯಿಂದ ಮುಖ್ಯವಾಗಿವೆ.

'ಒಲಿಂಪಿಕ್ಸ್ ನಿಯಮಗಳು ' ಚೊಕ್ಕವಾಗಿ ನಿರೂಪಣೆಗೊಂಡಿವೆ ; ಪುರುಷ ಮತ್ತುಮಹಿಳೆಯರ ಕ್ರೀಡೆಗಳ ಅವಕಾಶಗಳ ವಿವರಗಳು ದೊರೆಯುತ್ತವೆ. 'ಒಲಿಂಪಿಕ್ಸ್ ನ ಜನಪ್ರಿಯತೆ'ಯಲ್ಲಿ ಪರಂಪರೆಯ ಜೂಸ್ ದೇವತೆಯ ಪ್ರಾರ್ಥನೆಯ ಜ್ಯೋತಿಯನ್ನು




ಬೆಳಕಿನ ಪ್ರಸರಣದ ದ್ಯೋತಕವಾಗಿ ಹೊತ್ತುಕೊಂಡು ಒಯ್ಯುವ ಸಂಕೇತದ ಸರಳ ವಿವರಣೆ ಇದೆ. ಒಲಿಂಪಿಕ್ ಧ್ವಜದ ಐದು ಬಗೆಯ ಬಣ್ಣಗಳ ಬಳೆಗಳ ಜೋಡಣೆಯು ಐದು ಖಂಡಗಳ ನಡುವಿನ ಐಕ್ಯದ ಸಂದೇಶವನ್ನು ಸಾರುತ್ತದೆ ಎನ್ನುವ ಸಾರರೂಪದ ಮಾತುಗಳು ಈ ಕೃತಿಯನ್ನು ಆಪ್ತವಾಗಿಸುತ್ತವೆ.

'ಒಲಿಂಪಿಕ್ ವೀರರು' ವಿಶಿಷ್ಟ ಕ್ರೀಡಾ ಪ್ರತಿಭೆಗಳ ಹಿನ್ನೆಲೆಯ ಕಿರುಕಥನ. ಬಲಬೀರ್ ಸಿಂಗ್ ಮತ್ತು ಧ್ಯಾನ್ ಚಂದ್ ಅವರ ಹಾಕಿ ಕ್ರೀಡೆಯ ಸಾಧನೆ, ಕಿರಿಯ ವಯಸ್ಸಿನ ಬಾಟೆ ಮಥಿಯಾಸ, ಜಿಗಿತ ವೀರ ರಾಬರ್ಟ್ ರಿಚರ್ಡ್ಸ್, ಹಿಟ್ಲರ್‌ಗೆ ಮುಖಭಂಗ ಮಾಡಿದ ಒವನ್ಸ್, ಫಿನ್ಲೆಂಡ್‌ನ ಓಟದ ವೀರ ನಾಮೋ ಸುರ್ಮಿ, ಭಾರತದ ಬಡಕಲು ಶರೀರದ ಜೋಲಾ ಸಿಂಗ್, ಮುಷ್ಠಿ ಯುದ್ಧಪಟು ಕ್ಲಾಸಿಯಸ್ ಕ್ಲೇ, ಚಳಿಗೆ ಹೆದರಿದರೂ ಈಜಿನಲ್ಲಿ ಚಿನ್ನದ ಪದಕ ಪಡೆದ ಜಾನ್ ಫ್ರೆಜರ್-ಹೀಗೆ ಸವಾಲುಗಳನ್ನು ಎದುರಿಸಿ ಒಲಿಂಪಿಕ್ಸ್‌ನಲ್ಲಿ ಗೆದ್ದವರ ಸಾಹಸಗಾಥೆ

> "ಸುಮಾರು 120 ವರ್ಷಗಳ ಹಿಂದೆ ಗ್ರೀಸ್‌ನ ಅಥೆನ್ಸ್‌ನಲ್ಲಿ ಆರಂಭವಾದ ಒಲಿಂಪಿಕ್ಸ್ ನ ಚರಿತ್ರೆಯನ್ನು ಅಂಗೈಯಲ್ಲಿ ಅರಮನೆ ತೋರಿಸುವಂತೆ ಅದರ ಪ್ರಮುಖ ಮಾಹಿತಿಗಳ ಜೊತೆಗೆ ಭಾರತದ ಒಳಗೊಳ್ಳುವಿಕೆಯನ್ನು ಇಲ್ಲಿ ಅನಾವರಣ ಮಾಡಲಾಗಿದೆ."

ರೋಮಾಂಚಕ. 'ಒಲಿಂಪಿಕ್ಸ್‌ನಲ್ಲಿ ಭಾರತ' ಸಮರ್ಪಕ ಮಾಹಿತಿ ಮತ್ತು ಕ್ರೀಡಾಪ್ರೀತಿ ಬೆರೆತ ಸುಂದರ ಕಥನ. 1920 ರಿಂದ ತೊಡಗಿ 2016ರ ರಿಯೋ ಒಲಿಂಪಿಕ್ಸ್‌ವರೆಗಿನ ಭಾರತ ಕ್ರೀಡಾ ಸಾಧನೆಯ ಕಮೆಂಟರಿಯಲ್ಲಿ ಪದಕ ಗೆದ್ದವರ ಯಶೋಗಾಥೆಯ ಜೊತೆಗೆ ಅವರ ಭಾವಚಿತ್ರಗಳೂ ಇವೆ. ನಾರ್ಮನ್ ಪ್ರಿಚರ್ಡ್, ಜಾಧವ್, ಲಿಯಾಂಡರ್ ಫೇಸ್, ಕರ್ನಮ್ ಮಲ್ಲೇಶ್ವರಿ, ರಾಜವರ್ಧನ್ ಸಿಂಗ್ ರಾಥೋಡ್, ಅಭಿನವ ಬಿಂದ್ರಾ, ವಿಜಯಕುಮಾರ್, ಗಗನ್ ನಾರಂಗ್, ಸುಶೀಲ್ ಕುಮಾರ್, ಯೋಗೇಶ್ವರ ದತ್ತ, ಸೈನಾ ನೆಹ್ವಾಲ್, ಮೇರಿ ಕಾಮ್, ಪಿ ವಿ ಸಿಂಧು, ಸಾಕ್ಷಿ ಮಲಿಕ್-ಹೀಗೆ ಒಂದೊಂದು ಹೆಸರೂ ಒಂದೊಂದು ಕಥಾನಕ ಆಗುವ ಶಕ್ತಿ ಉಳ್ಳದ್ದು.

'ಒಲಿಂಪಿಕ್ ಸ್ವಾರಸ್ಯಗಳು'-ಸಂಕೇತ, ಪ್ರಯೋಜನೆ, ಅತ್ಯಂತ ಕಿರಿಯ ಆಟಗಾರ, ಅತ್ಯಂತ ಹಿರಿಯ ಆಟಗಾರ-ಇಂತಹ ವಿಶಿಷ್ಟ ಮಾಹಿತಿಗಳನ್ನು ಹೆಕ್ಕಿ ಕೊಡಲಾಗಿದೆ

ಅವನೀಂದ್ರನಾಥ್ ರಾವ್ ಅವರ 'ಒಲಿಂಪಿಕ್ ಚರಿತೆ 'ಕೃತಿಯು ಒಲಿಂಪಿಕ್ಸ್ ನ ಮ್ಯಾರಥಾನ್ ಓಟವನ್ನು ಒಂದೇ ಎತ್ತರಜಿಗಿತದಲ್ಲಿ ಹಾರಿ, 'ಸಾಹಿತ್ಯಪದಕ'ವನ್ನು ಕೊರಳಲ್ಲಿ ಹಾಕಿಕೊಳ್ಳುವ ಸಾಧನೆಯನ್ನು ಮಾಡಿದೆ. ಅವನೀಂದ್ರನಾಥ್ ಅವರು ಇನ್ನಷ್ಟು ಪದಕಗಳನ್ನು ಗೆಲ್ಲಲಿ. ಅವರಿಗೆ ಪ್ರೀತಿಯ ಢಅಭಿನಂದನೆಗಳು

**ಡಾ . ಬಿ.ಎ. ವಿವೇಕ ರೈ**

*(ಮುನ್ನುಡಿಯಿಂದ)*

## ಬಸವರಾಜ ಬಿ.ಇ. ಅವರಿಗೆ ಡಾಕ್ಟರೇಟ್



ದೆಹಲಿ ಸರ್ಕಾರದ ಡೈರೆಕ್ಟರೇಟ್ ಆಫ್ ಟ್ರೈನಿಂಗ್ ಅಂಡ್ ಟೆಕ್ನಿಕಲ್ ಎಜುಕೇಶನ್ ವತಿಯಲ್ಲಿ ಪೂಸ ಇನ್ಸಿಟಿಟ್ಯೂಟ್ ಅಫ್ ಟೆಕ್ನಾಲಜಿಯಲ್ಲಿ ಹಿರಿಯ ಉಪನ್ಯಾಸಕರಾದ ಶ್ರೀ ಬಸವರಾಜ ಬಿ.ಇ. ಅವರಿಗೆ ಗುಲ್ಬರ್ಗ ವಿಶ್ವವಿದ್ಯಾಲಯ 'ಪಿ.ಹೆಚ್.ಡಿ ಪದವಿ' ನೀಡಿದೆ. ಅವರು ಮಂಡಿಸಿದ 'ಏರ್ ಪೊಲ್ಯೂಶನ್ ಇನ್ ಡೆಲ್ಲಿ ಬಿಫೊರ್ ಅಂಡ್ ಆಫಟರ್ ದ ಮೆಟ್ರೋ ರೈಲ್' ಎಂಬ ಮಹಾಪ್ರಬಂಧಕ್ಕೆ ಡಾಕ್ಟರೇಟ್ ಲಭಿಸಿದೆ. ಬಸವರಾಜ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಅಭಿನಂದನೆಗಳು.

# ಲೇಖಕರ ಅಂತರಂಗವನ್ನು ಬಿಚ್ಚಿಟ್ಟ 'ನನ್ನ ಕನ್ನಡ' ಗೋಷ್ಠಿ



ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಕಳೆದ ನವಂಬರ ೩೦ರಂದು ಜೆ ಎನ್ ಯು ವಿನ ಕನ್ನಡ ಅಧ್ಯಯನ ಪೀಠವು 'ನನ್ನ ಕನ್ನಡ' ಎಂಬ ಗೋಷ್ಠಿಯನ್ನೂ, ಗಿರೀಶ್ ಕಾರ್ನಾಡರ 'ಹೂವು' ನಾಟಕವನ್ನೂ ಆಯೋಜಿಸಿತ್ತು. ಶರಾವತಿ ಕನ್ನಡ ಸಂಘವು ಸಹಯೋಗ ನೀಡಿತ್ತು.

ನನ್ನ ಕನ್ನಡ ಗೋಷ್ಠಿಯಲ್ಲಿ ವಿಚಾರ ಮಂಡಿಸಲು ಕನ್ನಡದ ಖ್ಯಾತ ಬರಹಗಾರರನ್ನು ಆಹ್ವಾನಿಸಲಾಗಿತ್ತು. ಕಾರ್ಯಕ್ರಮದ ಅರಂಭದಲ್ಲಿ ಪ್ರಾಸ್ತಾವಿಕವಾಗಿ ಮಾತಾಡಿದ ಪೀಠದ ಪ್ರಾಧ್ಯಾಪಕರಾದ ಪುರುಷೋತ್ತಮ ಬಿಳಿಮಲೆ ಅವರು 'ಕನ್ನಡದ ಪ್ರಮುಖ ಲೇಖಕರು ತಾವು ಬರೆಯುತ್ತಿರುವ ಕನ್ನಡದ ಬಗ್ಗೆ ಯಾವ ಯೋಚನೆಗಳನ್ನು ಇಟ್ಟುಕೊಂಡಿದ್ದಾರೆ ಮತ್ತು ಈ ಯೋಚನೆಗಳು ಕನ್ನಡವನ್ನು ಹೇಗೆ ಬೆಳೆಸಿವೆ' ಎಂಬುದನ್ನು ಅರ್ಥಮಾಡಿಕೊಳ್ಳಲು ಈ ಸಂಕಿರಣವನ್ನು ಆಯೋಜಿಸಲಾಗಿದೆ. ಇದೊಂದು ಅಕೆಡೆಮಿಕ್ ಕಸರತ್ತು ಅಲ್ಲ, ಬದಲು ಲೇಖಕರ ಆತ್ಮ ಚರಿತ್ರೆಯ ಕೆಲವು ಪುಟಗಳನ್ನು ತೆರೆದಿಡುವ ಪ್ರಯತ್ನ' ಎಂದು ಹೇಳಿದರು. ಕುಮಾರಿ ಎ. ಎಂ. ಮಮತಾ ಅವರು ಅತಿಥಿಗಳ ಪರಿಚಯ ಮಾಡಿದರು.

### ನನ್ನ ಕನ್ನಡ

'ನನ್ನ ಕನ್ನಡ' ವಿಷಯದ ಮೇಲೆ ಆರಂಭದಲ್ಲಿ ಮಾತಾಡಿದ ಶ್ರೀ ವಿವೇಕ ಶಾನಭಾಗ ಅವರು' ನನ್ನ ಮನೆ ಮಾತು ಕೊಂಕಣಿ, ಆದರೆ ನೋಡಿದ್ದು ಯಕ್ಷಗಾನ. ನನ್ನ ಅಲೋಚನೆ, ಓದು, ಬರಹ, ಜೀವನ ಕ್ರಮ ಎಲ್ಲವೂ ಕನ್ನಡದಲ್ಲಿಯೇ ರೂಪುಗೊಂಡಿತು. ಹಾಗಾಗಿ ಕನ್ನಡವೇ ನನ್ನ ಅಸ್ತಿತ್ವ. ಬಾಲ್ಯದಲ್ಲಿ ಓದಿದು ಕೆ. ಎಂ. ಮುನಿಷಿಯವರ ಕೃಷ್ಣಾವತಾರ ಮತ್ತು ಚಂದಮಾಮ ಕಥೆಗಳನ್ನು, ಮುಂದೆ ಬೆಳೆಯುತ್ತಾ ಓದಿದ್ದು ಅನಂತಮೂರ್ತಿಯವರ ಭಾರತೀಪುರ, ಯಶವಂತ ಚಿತ್ತಾಲರ ಕಥೆಗಳನ್ನು– ಇಂಥ ಹಲವು ಸಂಗತಿಗಳು ನನ್ನ ಕನ್ನಡವನ್ನು ಮಾತ್ರವಲ್ಲ, ನನ್ನ ಅಸ್ತಿತ್ವವನ್ನೂ ರೂಪಿಸಿತು' ಎಂದು ವಿಶ್ಲೇಷಿಸಿದರು. ಅವರು ಮುಂದೆ ಆಧುನಿಕ ಕನ್ನಡ ಇದಿರಿಸುತ್ತಿರುವ ಕೆಲವು ಬಿಕ್ಕಟ್ಟುಗಳ ಬಗೆಗೆ ಕೇಳುಗರ ಗಮನ ಸೆಳೆದು 'ಆಧುನಿಕ ಜಗತ್ತಿನ ಎಲ್ಲಾ ವಿಜ್ಞಾನ ತಂತ್ರಜ್ಞಾನದ ಅಭಿವ್ಯಕ್ತಿ ಕನ್ನಡದಲ್ಲಿ ಅಭಿವ್ಯಕ್ತವಾಗದಿರುವುದು ಕನ್ನಡದ ಬಡತನಕ್ಕೆ ಕಾರಣವಾಗಿದೆ. ಕನ್ನಡದಲ್ಲಿ ವಿಜ್ಞಾನದ ಸೂಕ್ಷ್ಮಗಳನ್ನು ಹಿಡಿದಿಡಬಹುದಾದ ಶಬ್ದ ಸಂಪತ್ತು ಇದೆ, ಆದರೆ ನಾವು ಅದನ್ನು ಬಳಸದೇ ಇಂಗ್ಲೀಷಿನ ಮೊರೆ ಹೋಗುತ್ತಿರುವುದು ವಿಷಾದನೀಯ' ಎಂದು ವಿಶ್ಲೇಷಿಸಿದರು.

ಗೋಷ್ಠಿಯಲ್ಲಿ ಮಾತಾಡಿದ ಇನ್ನೊಬ್ಬ ಲೇಖಕ ಶ್ರೀ ಜಯಂತ ಕಾಯ್ಕಿಣಿ ಅವರು 'ಭಾಷೆ ಎಂಬುದು ಕೇವಲ ಮೌಖಿಕ ಅಭಿವ್ಯಕ್ತಿಯಲ್ಲ. ಅದು ದೃಶ್ಯಾನುಭವ, ಶ್ರವಣಾನುಭವ ಹಾಗೂ ಜೀವನಾನುಭವನ್ನು ಒಳಗೊಂಡಿರುತ್ತದೆ, ನಮ್ಮ ಬದುಕಿನೊಂದಿಗೆ ನೇರವಾದ ಸಂಬಂಧವನ್ನು ಬೆಸೆದುಕೊಂಡಿರುತ್ತದೆ. ಜೊತೆಗೆ ನಮ್ಮ ವೃತ್ತಿ ಕೂಡ ಭಾಷೆಯನ್ನು ಹೊಸದುಗೊಳಸುತ್ತಿರುತ್ತದೆ. ಹಾಗಾಗಿ ಸಾಹಿತಿಯ ಭಾಷೆ, ವಿಜ್ಞಾನಿಯ ಭಾಷೆ, ಪತ್ರಕರ್ತನ ಭಾಷೆ ಹಾಗೂ ಕೂಲಿ ಕಾರ್ಮಿಕನ ಭಾಷಾಭಿವ್ಯಕ್ತಿ ಭಿನ್ನ ಭಿನ್ನವಾಗಿರುತ್ತದೆ. ಅವರ ಜೀವನ ಮೌಲ್ಯಗಳು ಕೂಡ ಭಿನ್ನವಾಗಿರುತ್ತವೆ' ಎಂದರು. ಮುಂದುವರಿದು ಅವರು ಕನ್ನಡ ಭಾಷೆಯ ಪ್ರಾದೇಶಿಕ ಭಿನ್ನತೆಯನ್ನು ಬೆಂಗಳೂರಿನಿಂದ ಉತ್ತರ ಕರ್ನಾಟಕದ ಕಡೆ ಹೋಗುವ ಬಸ್ಸಿನ ರೂಪಕದೊಂದಿಗೆ ನವಿರಾಗಿ ವಿವರಿಸಿದ ಅವರು, 'ಬೆಂಗಳೂರಿನ ಅತಿಮಿಶ್ರಿತ ಇಂಗ್ಲೀಷ್ ಪದಗಳೊಂದಿಗಿನ ಕನ್ನಡದ ಬಳಕೆ, ಮಧ್ಯ ಕರ್ನಾಟಕದ ಅಲ್ಪ ಇಂಗ್ಲೀಷ್ ಮಿಶ್ರಿತ ಗ್ರಾಮ್ಯ ಭಾಷೆ, ಉತ್ತರ ಕರ್ನಾಟಕದ ಇತರ ಭಾಷಾ ಮಿಶ್ರಿತ ಸಂಪೂರ್ಣ ಗ್ರಾಮ್ಯ ಭಾಷೆ ಹೇಗೆ ಭೌಗೋಳಿಕವಾಗಿ ಕನ್ನಡ ಬದಲಾವಣೆಯಾಗುತ್ತಿದೆ' ಎಂದು ವಿವರಿಸಿದರು.

ಗೋಷ್ಠಿಯ ಮೂರನೇ ಉಪನ್ಯಾಸ ನೀಡಿದ ಅನುವಾದಕಿ, ಚಿಂತಕಿ ಡಾ. ಸುಕನ್ಯಾ ಕನಾರಳ್ಳಿ ಅವರು 'ಕನ್ನಡ ಮನೆ ಭಾಷೆಯಾಗಿ, ಪ್ರಾದೇಶಿಕವಾಗಿ ಹಾಗೂ ಲಿಂಗಾಧಾರಿತವಾಗಿ ಭಿನ್ನ ಭಿನ್ನ ಅಭಿವ್ಯಕ್ತಿಯನ್ನು ಹೊಂದಿವೆ' ಎಂದು ಭಾಷೆಯ ಸೂಕ್ಷ್ಮತೆಗಳನ್ನು ದಿಟ್ಟವಾಗಿ ವಿಶ್ಲೇಷಿಸಿದರು. ಎಂದರು. ಭಾಷೆಯಲ್ಲಿ ಇರುವ ಲಿಂಗ ತಾರತಮ್ಯವನ್ನು ಗಾದೆ, ಬೈಗುಳುಗಳು, ಹೊಗಳಿಕೆ ಮೊದಲಾದ ಪ್ರಕಾರಗಳ ಸಹಯದಿಂದ ವಿವರಿಸಿದ ಅವರು 'ಬಹುತೇಕ ಎಲ್ಲಾ ಭಾಷೆಗಳು ಮಹಿಳಾ ವಿರೋಧಿ ಶಬ್ದಗಳನ್ನು ಹೊಂದಿದ್ದು ಕನ್ನಡವೂ ಇದಕ್ಕೆ ಹೊರತಲ್ಲ, ಇದನ್ನು ಪ್ರಜ್ಞಾವಂತರೂ, ಮಹಿಳೆಯರೂ ತುಂಬಾ ಸುಲಭವಾಗಿ ಬಳಸುತ್ತಾರೆ, ಅನೇಕರಿಗೆ ಇದು ಅಪರಾಧವಾಗಿ ಕಾಣದೇ ಸಹಜವಾಗಿ ಕಾಣುವುದು ವಿಪರ್ಯಾಸ, ಈ ಧೋರಣೆ ಸರಿಯಾಗಬೇಕಾದ ಅವಶ್ಯಕತೆ' ಎಂದು ಹೇಳಿದರು.

ಗೋಷ್ಠಿಯ ನಾಲ್ಕನೇ ಉಪನ್ಯಾಸ ನೀಡಿದ ಶ್ರೀ ಮಹಮ್ಮದ್ ರಫಿ ಪಾಶಾ ಅವರು ' ಇವತ್ತು



ನಾಗರಿಕ ಸೇವಾ ಪರೀಕ್ಷೆಗಳಲ್ಲಿ ಬಳಸುವ ಕನ್ನಡವೇ ಬೇರೆ. ಅಲ್ಲಿ ಭಾಷೆಯು ಹೊಂದಿರುವ ತರ್ಕ, ತತ್ವಜ್ಞಾನ, ಮತ್ತಿತರ ಮುಖ್ಯಾಂಶಗಳಿಗೆ ಯಾವ ಬೆಲೆಯೂ ಇಲ್ಲ. ಭಾಷೆಯು ಡಿಜಿಟಲ್ ಸಂಕೇತಗಳಾಗಿ ಬದಲಾಗಿದೆ. ಇದನ್ನು ಅರ್ಥಮಾಡಿಕೊಂಡವರು ಮಾತ್ರ ಇವತ್ತು ಗೆಲ್ಲುತ್ತಾರೆ' ಎಂದು ಗೋಷ್ಠಿಗೆ ಹೊಸ ಆಯಾಮ ನೀಡಿದರು.

ಇದೇ ಸಂದರ್ಭದಲ್ಲಿ ನಾಗರಿಕ ಸೇವಾ ಪರೀಕ್ಷೆಗೆ ಬರೆಯುವ ಅಭ್ಯರ್ಥಿಗಳ ಸಹಾಯಕ್ಕೆಂದು ಶ್ರೀ ಪಾಶಾ ಅವರು ಬರೆದ ಪುಸ್ತಕವನ್ನು ಅಕ್ಕ ಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಸಬೀಹಾ ಅವರು ಬಿಡುಗಡೆ ಮಾಡಿದರು.

ಆನಂತರ ಮಾತನಾಡಿದ ಡಾ. ಸಬಿಹಾ ಅವರು ತಾನು ಮುಸ್ಲಿಂ ಕುಟುಂಬದಲ್ಲಿ ಹುಟ್ಟಿದ್ದರಿಂದ ಮತ್ತು ತನ್ನ ಹೆಸರಿನಿಂದ ಅದು ಬೇರೆಯವರಿಗೆ ತಿಳಿಯುವುದರಿಂದ ಉಂಟಾದ ಬಿಕ್ಕಟ್ಟುಗಳನ್ನು ತಣ್ಣಗೇ ವಿವರಿಸುತ್ತಾ, 'ನನ್ನ ಬಾಲ್ಯವೆಲ್ಲವೂ ಕನ್ನಡದೊಂದಿಗೇ ಕಳೆಯಿತು. ಅದು ಉತ್ತರ ಕರ್ನಾಟಕದ ಕನ್ನಡವಾಗಿತ್ತು. ಆದರೆ, ನಾನು ಮಂಗಳೂರಿಗೆ ಹೋದ ಮೇಲೆ ನಾನು ನನ್ನ ಕನ್ನಡವನ್ನು ಬದಲಾಯಿಸಿಕೊಳ್ಳಬೇಕಾಯಿತು. ನನ್ನ ಗಂಡ ಮಂಡ್ಯದವರು, ಅವರ ಕನ್ನಡವೇ ಬೇರೆ, ಹೀಗೆ ಬಹುವಿಧ ಕನ್ನಡಗಳ ನಡುವೆ ನನ್ನ ಕನ್ನಡ ಬೆಳೆಯಿತು' ಎಂದು ಮನೋಜ್ಞವಾಗಿ ವಿವರಿಸಿದರು.

ಇದೇ ಸಂದರ್ಭದಲ್ಲಿ ಮೈಸೂರಿನ ಅರಿವು ಸಂಸ್ಥೆ ನಿರ್ಮಾಣ ಮಾಡಿದ ಮಂಟೇಸ್ವಾಮಿ ಸಾಕ್ಷ್ಯ ಚಿತ್ರವನ್ನು ಪ್ರದರ್ಶಿಸಲಾಯಿತು.

**ಹೂವು ನಾಟಕ**

ಕಾರ್ಯಕ್ರಮದ ಕೊನೆಯಲ್ಲಿ ಶಿವಮೊಗ್ಗದ ಹೊಂಗಿರಣ ತಂಡವು ಗಿರೀಶ್ ಕಾರ್ನಾಡರ 'ಹೂವು' ನಾಟಕವನ್ನು ಪ್ರದರ್ಶಿಸಿದರು. ಡಾ. ಸಾಸ್ವೆಹಳ್ಳಿ ಸತೀಶ್ ಅವರು ನಾಟಕವನ್ನು ನಿರ್ದೇಶಿಸಿದ್ದರು. ಏಕಪಾತ್ರಾಭಿನಯದಂತೆ ಸಾಗುವ ನಾಟಕವು ಸುಮಾರು 70 ನಿಮಿಷಗಳ ಕಾಲ ಪ್ರೇಕ್ಷಕರನ್ನು ತುದಿಗಾಲಲ್ಲಿ ನಿಲ್ಲಿಸಿದೊಂದು ವಿಶೇಷವೇ ಸರಿ. ಇದಕ್ಕೆ ಮುಖ್ಯ ಕಾರಣ ಅರ್ಚಕನ ವೇಷದಲ್ಲಿ ಅಸಾಮಾನ್ಯವಾಗಿ ನಟಿಸಿದ ಶ್ರೀ ಚಂದ್ರಶೇಖರ ಶಾಸ್ತ್ರಿ. ನಾಟಕವು ಕಾರ್ನಾಡರ ಬಹುತೇಕ ನಾಟಕಗಳಲ್ಲಿರುವಂತೆ ಮನುಷ್ಯ ಮತ್ತು ದೇವರ ಸಂಬಂಧವನ್ನು ಅನ್ವೇಷಿಸುತ್ತದೆ. ಈ ನಾಟಕದ ನಾಯಕ ಒಬ್ಬ 'ಅರ್ಚಕ' ಅವನೇ ಹೇಳಿಕೊಳ್ಳುವ ಹಾಗೆ ಇದು ಅವನ ಅಸ್ಮಿತೆ. ಈ ಅರ್ಚಕನ ಅಸ್ಮಿತೆಯ ಇನ್ನೊಂದು ಮುಖ ಅವನ ಹೂವಿನ ಕಲೆಗಾರಿಕೆ. ಕಲೆ ಇಲ್ಲಿ ಭಕ್ತಿಯ ಸಾಧನವಾಗಿಯೇ ತನ್ನ ಸಾರ್ಥಕತೆಯನ್ನು ಕಂಡುಕೊಳ್ಳುತ್ತದೆ. ಅರ್ಚಕ ತನ್ನ ಸುತ್ತ ತಾನೇ ಕಟ್ಟಿಕೊಂಡಿದ್ದ ಶ್ರೇಷ್ಠ ವ್ಯಕ್ತಿತ್ವ ಎಂಬ ಅಭೇದ್ಯ ಕೋಟೆಯಲ್ಲಿ ಚಂದ್ರಾವತಿಯೆಂಬ ಹೆಣ್ಣು ಬಿರುಕು ಮೂಡಿಸುತ್ತಾಳೆ. ಈ ಬಿರುಕು ಅರ್ಚಕನನ್ನು ಭಕ್ತಿಯ ದಾರಿಯಿಂದ ಎಲ್ಲಿಗೆ ಕರೆದುಕೊಂಡು ಮುಟ್ಟಿಸುತ್ತದೆ ಎಂಬುದನ್ನು ನಾಟಕ ಹುಡುಕುತ್ತಲೇ ಸಾಗುತ್ತದೆ. ಕಾರ್ನಾಡರು ಈ ನಾಟಕವನ್ನು 'ಬಾಣ ರೂಪಕ' ಎಂದು ಕರೆದಿದ್ದಾರೆ. ಕಾರ್ನಾಡರ ವಿಶಿಷ್ಟ ಪ್ರತಿಭೆ ಹಾಗೂ ಕತೆಯಲ್ಲಿಯೇ ಅಂತರ್ಗತವಾದ ನಾಟಕೀಯತೆ ಪ್ರದರ್ಶನದುದ್ದಕ್ಕೂ ಎದ್ದು ಕಂಡಿತು. ಸಂತೋಷ ಕಟ್ಟಿ ಅವರ ಸಂಗೀತ, ಸುಂದರೇಶ್ ಅವರ ರಂಗಸಜ್ಜಿಕೆ, ಚಂದ್ರಶೇಖರ್ ಹಿರೇಗೋಣಿಗೆರೆ ಅವರ ಪ್ರಸಾದನ, ಕೆ.ಎಸ್.ಸುರೇಂದ್ರ ಹಾಗೂ ಶಿವಕುಮಾರ ಮಾವಲಿ ಅವರ ಧ್ವನಿ ಸಂಯೋಜನೆ ಪರಿಣಾಮಕಾರಿಯಾಗಿತ್ತು. ಶ್ರೀ ದಿನೇಶ್ ಶೆಣೈ ಅವರು ಪೂರ್ಣ ಸಹಕಾರ ನೀಡಿದರು.

ಹೀಗೆ ಈ ಕಾರ್ಯಕ್ರಮವು ಹೊಸ ವಿಷಯಗಳನ್ನು ತೆರೆದು ತೋರಿಸಿ ಭಾಗವಹಿಸಿದ ನೂರಾರು ವಿದ್ಯಾರ್ಥಿಗಳ ಮೆಚ್ಚುಗೆಗೆ ಪಾತ್ರವಾಯಿತು.



**ಹೂವು ನಾಟಕದ ದೃಶ್ಯ**


**ಕೃಷ್ಣಮೂರ್ತಿ**

# ಹುಚ್ಚಾನೆ

ಕತೆ ಅಂದ್ರೆ ಯಾರಿಗೆ ಇಷ್ಟ ಆಗಲ್ಲ ಹೇಳಿ ಮಕ್ಕಳೆ? ಒಳ್ಳೊಳ್ಳೆ ಕತೆ ಆದ್ರಂತೂ ದೊಡ್ಡವರೂ ಓದಿ ಖುಷಿ ಪಡ್ತಾರೆ. ಇತ್ತೀಚೆಗೆ ಪುಸ್ತಕ ಓದುವವರ ಸಂಖ್ಯೆ ಕಡಿಮೆ ಆಗಿದೆ ನಿಜ. ಆದ್ರೆ ಒಂದಲ್ಲ ಒಂದು ಮಾಧ್ಯಮದ ಮೂಲಕ ಓದು ನಡೆದೇ ಇದೆ ಅಲ್ವೇ? ಓದ ಬೇಕು ಓದಿ ಜೈಸಬೇಕು...ನವೆಂಬರ್ ತಿಂಗಳು ಅಂದ್ರೆ ಸಾಕು ನಮಗೆಲ್ಲ ರಾಜ್ಯೋತ್ಸವದ ಸಂಭ್ರಮ ಅಲ್ವಾ ಮಕ್ಕಳೇ? ಕನ್ನಡ ಭಾಷೆಗೆ ಎಷ್ಟೊಂದು ಜ್ಞಾನಪೀಠ ಪ್ರಶಸ್ತಿಗಳು ಸಂದಿವೆ. ಅದಕ್ಕೆಲ್ಲಾ ಕಾರಣ ನಮಗಿರುವ ಭಾಷಾಧ್ಯಯನದ ಆಸಕ್ತಿ. ಭಾಷಾಭಿಮಾನ ಇರಬೇಕು, ಆದರೆ ದುರಭಿಮಾನ ಸಲ್ಲದು. ಬೇರೆ ಬೇರೆ ಭಾಷೆಗಳಿಂದ ನಾವು ಅವೆಷ್ಟೋ ಪದಗಳನ್ನು ಆಮದು ಮಾಡಿಕೊಂಡಿರೋದಕ್ಕೆ ನಮ್ಮ ಕನ್ನಡಕ್ಕೆ ಸಮೃದ್ಧಿ ಬಂದಿರೋದು. ಒಂದರ್ಥದಲ್ಲಿ ನಾವು ಮಡಿವಂತರಲ್ಲ...ಹೀಗಾಗಿ ನಾವು ಈ ದೇಶದಲ್ಲಿ ಉಳಿದೆಲ್ಲಾ ರಾಜ್ಯಗಳಿಗೆ ಹೋಲಿಸಿದರೆ ಮೌನ ಸಾಧಕರು! ಸರಿ, ಈಗ ಕತೆ ಹೇಳುವ ಸರದಿ...ಈ ಬಾರಿ ನಾನು ನಿಮಗೆ ಹೇಳಲಿರುವ ಕತೆ-ಹಿಂದಿ ಭಾಷೆಯ ಹೆಸರಾಂತ ಲೇಖಕ ಶ್ರೀ ಮುಂಶಿ ಪ್ರೇಮಚಂದ್ ಅವರು ಬರೆದಿರುವ ಒಂದು ಕತೆ.

ಮೋತಿ ಆನೆ, ಮಹಾರಾಜರ ಪಟ್ಟದ ಆನೆ. ತುಂಬಾ ಸೀದಾ ಸಾದಾ ಇದ್ದಂಥ ಜಾಣ ಆನೆ. ಆದ್ರೆ ಒಮ್ಮೊಮ್ಮೆ ಅದಕ್ಕೆ ಮದ ಏರುತ್ತಿತ್ತು ಆಗ ಅದಕ್ಕೆ ತನ್ನ ಹತೋಟಿಯೇ ತಪ್ಪಿಹೋಗುತ್ತಿತ್ತು. ಆಗ ಅದು ಮಾವುತನ ಮಾತನ್ನೂ ಕೇಳುತ್ತಿರಲಿಲ್ಲ. ಒಂದು ಬಾರಿಯಂತೂ ಅದು ಮಾವುತನನ್ನೇ ಮುಗಿಸಿಬಿಟ್ಟಿತ್ತು. ಮಹಾರಾಜರಿಗೆ ಇದರಿಂದ ಸಿಟ್ಟು ಬಂದು ಅದರ ಪದವಿಯನ್ನೇ ಕಿತ್ತುಕೊಂಡು ತಮ್ಮ ಸವಾರಿ ಆನೆಗಳ ದಂಡಿನಿಂದ ತೆಗೆದುಬಿಟ್ರು. ಕೂಲಿಗಳ ಥರ ಅದಕ್ಕೆ ದಿಮ್ಮಿಗಳನ್ನು ಸಾಗಿಸಬೇಕಾಯಿತು, ಬಂಡೆಗಲ್ಲುಗಳನ್ನು ತಳ್ಳಬೇಕಾಯಿತು ಮತ್ತು ಸಂಜೆ ಆದಕೂಡಲೇ ಅದನ್ನು ಆಲದ ಮರಕ್ಕೆ ಸರಪಳಿಗಳಿಂದ ಕಟ್ಟಿ ಹಾಕಲಾಗುತ್ತಿತ್ತು. ಸವಾರಿ ಆನೆಗಳಿಗೆ ಸಿಗುತ್ತಿದ್ದ ಊಟ ನಿಂತು ಹೋಯಿತು. ಅದರ ಬದಲಿಗೆ ಒಣಗಿದ ಕೊಂಬೆಗಳನ್ನು ತಂದು ಹಾಕಲಾಗುತ್ತಿತ್ತು. ಅದನ್ನೇ ಅಗಿದು ಅಗಿದು ಮೋತಿ ತನ್ನ ಜಠರಾಗ್ನಿಯನ್ನು ತಣಿಸಿಕೊಳ್ಳುತ್ತಿತ್ತು. ಈ ದುರ್ದೆಶೆಯನ್ನು ತನ್ನ ಮೊದಲಿನ ದೆಶೆಗೆ ಹೋಲಿಸಿಕೊಂಡಾಗಲೆಲ್ಲಾ ಅದು ತುಂಬಾ ಕೊಸರಾಡುತ್ತಿತ್ತು. ರಾಜನ ಪಟ್ಟದ ಆನೆಯಾಗಿದ್ದ ನಾನು ಈಗ ಮಾಮೂಲಿ ಕೂಲಿಯಾಗಿಬಿಟ್ಟೆನಲ್ಲ! ಎಂದು ಯೋಚಿಸುತ್ತ ಅದು ಜೋರಾಗಿ ಘೀಳಿಡುತ್ತಿತ್ತು, ತೂರಾಡುತ್ತಿತ್ತು. ಒಂದು ದಿನ ಅದಕ್ಕೆ ಎಲ್ಲಿಲ್ಲದ ಶಕ್ತಿ ಮೈಯಲ್ಲಿ ಸಂಚಾರವಾಗಿ ಸರಪಳಿಯನ್ನೇ ತುಂಡರಿಸಿಕೊಂಡು ಕಾಡಿನೆಡೆಗೆ ಓಡಿಹೋಯಿತು.

ಸ್ವಲ್ಪ ದೂರದಲ್ಲಿ ಒಂದು ನದಿ ಇತ್ತು. ಮೋತಿ ಆ ನದಿಗೆ ಇಳಿದು ಮನಸಾರೆ ಮಿಂದಿತು. ನಂತರ ಅಲ್ಲಿಂದ ನೇರವಾಗಿ ಕಾಡಿಗೆ ಹೊರಟಿತು. ಇತ್ತ ಮಹಾರಾಜರ ಸೈನಿಕರು ಅದನ್ನು ಹಿಡಿಯಲು ಓಡಿದರು ಆದರೆ ಅದರ ಹತ್ತಿರ ಹೋಗಲು ಯಾರಿಗೂ ಧೈರ್ಯವಿರಲಿಲ್ಲ. ಕಾಡು ಪ್ರಾಣಿ ಕಾಡಿಗೇ ತೆರಳಿತ್ತು.



ಕಾಡಿಗೆ ಹೋದ ಮೋತಿ ತನ್ನ ಗೆಳೆಯರು ಯಾರಾದರೂ ಸಿಗಬಹುದೇ ಎಂದು ಹುಡುಕ ತೊಡಗಿತು. ಸ್ವಲ್ಪ ದೂರದಲ್ಲಿ ಕಾಡಾನೆಗಳ ಒಂದು ಹಿಂಡು ಇತ್ತು. ಕಡಿದ ಸರಪಳಿ, ಕೊರಳಲ್ಲಿ ಹಗ್ಗ ಇರುವ ಮೋತಿಯನ್ನು ನೋಡಿ ಅವು ಮುಖ ತಿರುಗಿಸಿದವು. ಅದರ ಯೋಗಕ್ಷೇಮವನ್ನೂ ಕೇಳಲಿಲ್ಲ. ಅವುಗಳ ಮುಖದಲ್ಲಿ ಭಾವನೆ "ನೀನು ಗುಲಾಮ, ಅದರಲ್ಲೂ ಉಪ್ಪು ತಿಂದ ಮನೆಗೆ ಎರಡು ಬಗೆದ ಗುಲಾಮ, ನಿನಗೆ ಈ ಕಾಡಿನಲ್ಲಿ ಸ್ಥಳವಿಲ್ಲ" ಎನ್ನುವಂತಿತ್ತು. ಅವು ಕಣ್ಮರೆಯಾಗುವವರೆಗೂ ಮೋತಿ ನಿಂತಲ್ಲೇ ನಿಂತಿತು. ಆಮೇಲೆ ಅದೇನು ಅನಿಸಿತೋ! ಅಲ್ಲಿಂದ ನೇರವಾಗಿ ಅರಮನೆಯ ಕಡೆ ಓಡುತ್ತಾ ಹೋಯಿತು.

ದಾರಿಯಲ್ಲಿರುವಾಗಲೇ ಅದಕ್ಕೆ ಮಹಾರಾಜರು ಬೇಟೆಯಾಡಲು ಕುದುರೆ ಏರಿ ಬರುತ್ತಿರುವುದು ಕಂಡಿತು. ತಕ್ಷಣವೇ ಅದು ಪಕ್ಕದಲ್ಲಿದ್ದ ದೊಡ್ಡದಾದ ಬಂಡೆಯೊಂದರ ಹಿಂದೆ ಅವಿತುಕೊಂಡಿತು. ಬಿಸಿಲು ಜೋರಾಗಿತ್ತು. ಮಹಾರಾಜರು ತುಸು ವಿಶ್ರಾಂತಿಗಾಗಿ ಕುದುರೆಯಿಂದ ಕೆಳಗಿಳಿದರು. ಅಕಸ್ಮಾತ್ತಾಗಿ ಮೋತಿ ಅವಿತೆಡೆಯಿಂದ ಹೊರಬಂದು ಮಹಾರಾಜರ ಕಡೆ ಘೀಳಿಡುತ್ತಾ ಧಾವಿಸಿತು. ಮಹಾರಾಜರು ಗಾಬರಿಯಾಗಿ ಓಡಿ ದೂರದಲ್ಲಿದ್ದ ಒಂದು ಗುಡಿಸಿಲಿನ ಒಳಗೆ ಹೊಕ್ಕರು. ಸ್ವಲ್ಪ ಸಮಯದ ಬಳಿಕ ಮೋತಿಯೂ ಅಲ್ಲಿಗೆ ಬಂದು ತಲುಪಿತು. ಅದು ಮಹಾರಾಜರು ಗುಡಿಸಿಲಿನ ಒಳಗೆ ಹೋಗಿದ್ದನ್ನು ನೋಡಿತ್ತು. ಅದು ಮೊದಲಿಗೆ ಆ ಗುಡಿಸಿಲಿನ ಮಾಡನ್ನು ತನ್ನ ಸೊಂಡಿಲಿನಿಂದ ಕಿತ್ತು ಎಸೆಯಿತು, ನಂತರ ಅದನ್ನು ತನ್ನ ಕಾಲುಗಳಿಂದ ತುಳಿತುಳಿದು ಹೊಸಕಿ ಹಾಕಿತು.

ಒಳಗಡೆ ಮಹಾರಾಜರು ಭಯಭೀತರಾಗಿದ್ದರು. ಪ್ರಾಣ ಉಳಿಸಿಕೊಳ್ಳಲು ಅವರಿಗೆ ಬೇರೆ ದಾರಿ ಇರಲಿಲ್ಲ.

ಕೊನೆಗೆ ಏನೂ ಹೊಳೆಯದಾಗಿ ಅವರು ಹಿಂದಿನ ಗೋಡೆಯನ್ನೇರಿ ಹಾರಿ ಅಲ್ಲಿಂದ ಕಾಲಿಗೆ ಬುದ್ಧಿ ಹೇಳಿದರು. ಗುಡಿಸಿಲಿನ ಎದುರು ಮೋತಿ ಗೋಡೆಯನ್ನು ಹೇಗೆ ಬೀಳಿಸಲಿ ಎಂದು ಯೋಚಿಸುತ್ತ ಪ್ರಯತ್ನ ಮುಂದುವರಿಸಿತ್ತು. ಕೊನೆಗೂ ಅದು ಗೋಡೆಯನ್ನು ಬೀಳಿಸುವಲ್ಲಿ ಯಶಸ್ವಿಯಾಯಿತು. ಮಣ್ಣಿನ ಗೋಡೆ, ಹುಚ್ಚಾನೆಯ ಶಕ್ತಿಯನ್ನು ತಡೆಯಬಲ್ಲದೇ? ಒಳಗೆ ಮಹಾರಾಜರು ಕಾಣಿಸದೇ ಇದ್ದುದನ್ನು ನೋಡಿದ ಮೋತಿ ಇನ್ನುಳಿದ ಗೋಡೆಗಳನ್ನು ಮುರಿದು ಬೀಳಿಸಿ ಕಾಡಿನ ಕಡೆ ಓಡಿತು.

ಅರಮನೆಗೆ ವಾಪಸಾದ ಮಹಾರಾಜರು "ಯಾರು ಮೋತಿಯನ್ನು ಜೀವಂತವಾಗಿ ಹಿಡಿದು ತರುವರೋ ಅವರಿಗೆ ಒಂದು ಸಾವಿರ ರೂಪಾಯಿಗಳ ಬಹುಮಾನ ನೀಡಲಾಗುವುದು"

ಎಂದು ಡಂಗುರ ಹೊಡೆಸಿದರು. ಇದನ್ನು ಕೇಳಿದ ಅದೆಷ್ಟೋ ಜನರು ಮೋತಿಗೆ ಬಲೆ ಬೀಸಲು ಕಾಡಿಗೆ ತಾ ಮುಂದು ತಾ ಮುಂದೆಂದು ಹೋಗಿ ಬರಿಗೈಯಲ್ಲಿ ಮರಳಿದರು.

ಮೋತಿಯ ಮಾವುತನಿಗೊಬ್ಬ ಮಗ ಇದ್ದ. ಅವನ ಹೆಸರು ಮುರಳಿ. ಅವನಿಗಿನ್ನೂ 8–9 ವರ್ಷ, ಹೀಗಾಗಿ ಮಹಾರಾಜರು ಅನುಕಂಪದ ಹಿನ್ನೆಲೆಯಲ್ಲಿ ಅವನಿಗೂ, ಅವನ ತಾಯಿಗೂ ಊಟ–ತಿಂಡಿಗಾಗಿ ಸ್ವಲ್ಪ ಹಣವನ್ನು ಕೊಡುತ್ತಿದ್ದರು. ಮುರಳಿ ಚಿಕ್ಕವನಾಗಿದ್ದರೂ ಕೂಡಾ ಧೈರ್ಯದ ಗುಂಡಿಗೆಯಾಗಿತ್ತು ಅವನದು. ಮೋತಿಯನ್ನು ಹಿಡಿದು ತಂದೇ ತೀರುವೆನೆಂದು ಹಠ ಹಿಡಿದು ಅವನು ಕಾಡಿಗೆ ಹೋಗಲು ಸಿದ್ಧನಾದ. ತಾಯಿ ಎಷ್ಟೇ ಕೋರಿಕೊಂಡರೂ, ಊರಿನ ಜನರು ವಿನಂತಿಸಿಕೊಂಡರೂ ಹುಡುಗ ಕಾಡಿಗೆ ಹೊರಟೇಬಿಟ್ಟ.

ಕಾಡಿನಲ್ಲಿ ಮರವೊಂದರ ಮೇಲೆ ಕುಳಿತು ಕಣ್ಣಾಡಿಸಿದ ಮುರಳಿ, ಅಂತೂ ಇಂತೂ ಮೋತಿಯನ್ನು ಕಂಡೇ ಬಿಟ್ಟ. ಅವನೇರಿದ ಮರದ ಕಡೆಗೇ ಅದು ತಲೆ ತಗ್ಗಿಸಿಕೊಂಡು ಬರುತ್ತಾ ಇತ್ತು. ಸಿಟ್ಟು ಸ್ವಲ್ಪ ತಣ್ಣಗಾಗಿದೆ ಎಂಬುದು ಅದರ ನಡಿಗೆಯಿಂದ ತಿಳಿಯುವಂತಿತ್ತು.

ಮೋತಿ ತಾನಿರುವ ಮರದ ಕೆಳಗೆ ಬಂದು ನಿಲ್ಲುತ್ತಿರುವಂತೆಯೇ ಅವನು ಕರೆದ..."ಮೋತೀ"

ಮೋತಿಗೆ ಆ ಧ್ವನಿಯ ಪರಿಚಯವಿತ್ತು. ಅದು ತಲೆ ಎತ್ತಿ ಮೇಲೆ ನೋಡಿತು. ಮುರಳಿಯನ್ನು ನೋಡಿ ಗುರುತಿಸಿತು. ಅವನನ್ನೇ ತಾನು ತನ್ನ ಸೊಂಡಿಲಿನಿಂದ ಮೇಲೆತ್ತಿ ತಲೆಯ ಮೇಲೆ ಕುಳ್ಳಿರಿಸಿಕೊಳ್ಳುತ್ತಿದ್ದುದು, ಅವನ ತಂದೆಯನ್ನೇ ತಾನು ಕೊಂದು ಹಾಕಿರುವುದು ಇವೆಲ್ಲಾ ನೆನಪಾಗಿ ಅದಕ್ಕೆ ಮುರಳಿಯ ಬಗ್ಗೆ ಮರುಕ ಉಂಟಾಯಿತು. ಖುಷಿಯಿಂದ ಸೊಂಡಿಲಾಡಿಸಿತು.

ಮುರಳಿಗೆ ಅದರ ಮನಸ್ಸಿನ ಭಾವನೆಗಳು ಅರ್ಥವಾದವು. ಅವನು ಮರದಿಂದ ಕೆಳಗಿಳಿದು ಮೋತಿಯ ಸೊಂಡಿಲನ್ನು ತಟ್ಟತೊಡಗಿದ. ನಂತರ ಅದಕ್ಕೆ ಕುಳಿತುಕೊಳ್ಳುವಂತೆ ಸಂಜ್ಞೆ ಮಾಡಿದ. ಮೋತಿ ಕುಳಿತುಕೊಳ್ಳಲಿಲ್ಲ, ಬದಲಿಗೆ ಅದು ಮೊದಲಿನಂತೆಯೇ ಮುರಳಿಯನ್ನು ತನ್ನ ಸೊಂಡಿಲಿನಿಂದ ಎತ್ತಿ ತಲೆಯ ಮೇಲೆ ಕುಳ್ಳಿರಿಸಿಕೊಂಡು ಅರಮನೆ ಕಡೆ ಹೊರಟಿತು.

ಮುರಳಿ, ಮೋತಿಯೊಂದಿಗೆ ಅರಮನೆಯ ದ್ವಾರವನ್ನು ತಲುಪಿದಾಗ ಅಲ್ಲಿ ನೆರೆದವರೆಲ್ಲರೂ ಬೆರಳು ಕಚ್ಚಿದರು. ಹುಚ್ಚಾನೆಯ ಹತ್ತಿರ ಹೋಗುವ ಸಾಹಸ ಯಾರಿಗೂ ಇರಲಿಲ್ಲ. ಮುರಳಿ ಕೂಗಿ ಹೇಳಿದ, " ಹೆದರ ಬ್ಯಾಡ್ರೀ, ಮೋತಿ ಬಿಲ್ಕುಲ್ ಶಾಣ್ಯಾ ಆಗ್ಯಾನ, ಈಗ ಇಂವಾ ಯಾರ ಕೂಡಾ ಮಂಗ್ಯಾಟ ಮಾಡಂಗಿಲ್ಲ." ಮಹಾರಾಜರೂ ಕೂಡಾ ಹೆದರುತ್ತಲೇ ಮೋತಿಯ ಎದುರು ಬಂದರು. ಹುಚ್ಚಾನೆಯಾಗಿದ್ದ ಇದು ಈಗ ಬಡ ಆಕಳಿನಂತೆ ನಿಂತಿರುವುದನ್ನು ನೋಡಿ ಅವರಿಗೆ ಆಶ್ಚರ್ಯವಾಗಿತ್ತು.

ಅವರು ಮುರಳಿಗೆ ಒಂದು ಸಾವಿರ ರೂಪಾಯಿ ಬಹುಮಾನವನ್ನಂತೂ ಕೊಟ್ಟರು, ಜೊತೆಗೇ ಅವನನ್ನು ತಮ್ಮ ಆಪ್ತ ಮಾವುತನನ್ನಾಗಿ ನೇಮಿಸಿಕೊಂಡರು. ಮೋತಿಯೂ ಕೂಡಾ ಮತ್ತೊಮ್ಮೆ ಮಹಾರಾಜರ ನೆಚ್ಚಿನ ಪಟ್ಟದಾನೆಯಾಯಿತು.

ಕತೆ ಹೇಗನಿಸಿತು ಮಕ್ಕಳೇ? ಪದವಿ ಇದ್ದಾಗ ನಮ್ಮ ಸ್ಥಿತಿಗತಿಗಳು ಇದೇ ರೀತಿ ಇರುತ್ತವೆ ಅಲ್ಲವೇ? ಕಾಡಿನಲ್ಲಿ ಸ್ವಚ್ಛಂದವಾಗಿ ಅಲೆಯುತ್ತಿದ್ದ ಆನೆಗಳೂ ಕೂಡಾ ಗುಲಾಮಗಿರಿಯ ಬಗ್ಗೆ ಎಷ್ಟು ಅಸಡ್ಡೆ ತೋರಿಸಿದವು ಅಲ್ಲವೇ? ಹಸಿವು ಎಂಬುದು ನಮಗೆ ಪ್ರಾಣವನ್ನೂ ಲೆಕ್ಕಿಸದೇ ಸಾಧನೆ ಮಾಡಲು ಪ್ರೇರಣೆ ನೀಡುತ್ತದೆ ಎಂಬುದು ಮುರಳಿಯ ಸಾಹಸದಿಂದ ತಿಳಿಯುತ್ತದೆ ಅಲ್ಲವೇ? ಈ ಕತೆಯಿಂದ ನಿಮಗೆ ಇನ್ನೂ ಏನೇನು ತಿಳಿದವು ಎನ್ನುವುದನ್ನು ನನ್ನೊಂದಿಗೆ ಹಂಚಿಕೊಳ್ಳುತ್ತೀರಿ ಅಲ್ಲವೇ? ನಿಮ್ಮ ಅನಿಸಿಕೆಗಳನ್ನು ಕಳಿಸಿದರೆ ಅಭಿಮತದಲ್ಲಿ ಪ್ರಕಟಿಸುತ್ತೇವೆ...ಸರಿ, ಚಳಿ ಜೋರಾಗಿ ಶುರುವಾಗೋದ್ರಲ್ಲಿದೆ. ಸ್ವೆಟರ್ ಧರಿಸಿ ಬೆಚ್ಚಗೆ ಇರಿ. ಚಳಿಯಲ್ಲಿ ನರಳುವ ಜನರಿಗೆ ಬೆಚ್ಚಗಿನ ಉಡುಪುಗಳನ್ನು ಕೊಟ್ಟು ನಿಮ್ಮಿಂದಾದಷ್ಟು ಸಮಾಜಸೇವೆ ಮಾಡಿ...

ಇಂತೀ ನಿಮ್ಮ

***ಸಂತೋಷ್ ಮಾಮಾ***

# ವೆಂಕಟೇಶ್ ರಾಯಚೂರು ಅವರ ಚಿತ್ರಕಲಾ ಪ್ರದರ್ಶನ




ದೆಹಲಿ ಕರ್ನಾಟಕ ಸಂಘದಲ್ಲಿ ಕಲಾವಿದ ವೆಂಕಟೇಶ್ ರಾಯಚೂರು ಅವರ ಚಿತ್ರಕಲಾ ಪ್ರದರ್ಶನ ಡಿಸೆಂಬರ್ 13 ರಿಂದ 15, 2019ರವರೆಗೆ ಸಂಘದ ಆರ್ಟ್ ಗ್ಯಾಲರಿಯಲ್ಲಿ ನಡೆಯಿತು. ಚಿತ್ರಕಲಾ ಪ್ರದರ್ಶನವನ್ನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆಯವರು ಉದ್ಘಾಟಿಸಿ ಕಲಾವಿದ ವೆಂಕಟೇಶ್ ಅವರು ಮುಂಬರುವ ದಿನಗಳಲ್ಲಿ ಇನ್ನೂ ಒಳ್ಳೆಯ ಕಲಾಕೃತಿಗಳನ್ನು ರಚಿಸಲಿ ಹಾಗೂ ಭವಿಷ್ಯತ್ತಿನಲ್ಲಿ ರಾಷ್ಟ್ರಮಟ್ಟದ ಖ್ಯಾತಿಯನ್ನು ಪಡೆಯಲಿ ಎಂದು ಶುಭ ಹಾರೈಸಿದರು. ಡಾ. ಶಂಕರ್ ಕುಂದಗೋಳ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಡಾ. ಕೀರ್ತನ ಕುಣಿಕುಲ್ಲಾಯ, ದೆಹಲಿಯ ರಾಷ್ಟ್ರಮಟ್ಟದ ಕಲಾವಿದ ಸುಧೀರ್ ಫಡ್ನೀಸ್, ಕಾರ್ಯಕಾರಿ ಸಮಿತಿ ಸದಸ್ಯ ಶಿವಾನಂದ ಇಂಗಳೇಶ್ವರ ಮುಂತಾದವರು ಉಪಸ್ಥಿತರಿದ್ದರು.

ವೆಂಕಟೇಶ್ ಅವರ ಚಿತ್ರಗಳಲ್ಲಿ ಪರಿಸರದ ಕಾಳಜಿ ಎದ್ದು ಕಾಣಿಸುತ್ತಿತ್ತು. ಪ್ರತಿಯೊಂದು ಚಿತ್ರದಲ್ಲೂ ಹಿನ್ನೆಲೆಯಲ್ಲಿ ಪರಿಸರವನ್ನು ಇಟ್ಟುಕೊಂಡು ಬಣ್ಣಗಳ ಸಮತೋಲನದೊಂದಿಗೆ ಅವರು ಬಿಡಿಸಿದ ಚಿತ್ರಗಳು ಮನಸೆಳೆಯುವಲ್ಲಿ ಯಶಸ್ವಿಯಾದವು. ಇದರೊಟ್ಟಿಗೆ ಪರಂಪರೆಯನ್ನು ಮರೆಯದಂತೆ ಮುಂದುವರಿಸಿಕೊಂಡು ಹೋಗುವ ಹಾಗೂ ಮುಂದಿನ ಪೀಳಿಗೆಗೆ ಪರಿಚಯಿಸುವ ನಿಟ್ಟಿನಲ್ಲಿ ಅವರು ಕಂದೀಲ, ಹಕ್ಕಿ ಗೂಡುಗಳು, ವನ್ಯಪ್ರಾಣಿಗಳು ಇತ್ಯಾದಿಗಳನ್ನು –ಸಮರ್ಪಕವಾಗಿ ಚಿತ್ರಗಳಲ್ಲಿ ಬಳಸಿದ್ದಾರೆ.

# ಸವಿತಾ ಇನಾಮದಾರ ಅವರಿಗೆ ಅಭಿನಂದನೆ




'ಯಾವ ಮೋಹನ ಮುರಳಿ ಕರೆಯಿತು ದೂರ ತೀರಕೆ ನಿನ್ನನು' ಅಡಿಗರ ಈ ರಚನೆಯನ್ನು ನಿಜ ಮಾಡಲಂತೆ ದೂರದ ದೆಹಲಿಯಿಂದ ಕಣ್ಣಲ್ಲಿ ಮಿಂಚು ತುಂಬಿಕೊಂಡು ಕಲಬುರಗಿಗೆ ಹಾರಿ ಬಂದಿಳಿದಿದ್ದರು ತಂಗಿ ಸವಿತಾ ಇನಾಮದಾರ. ಅವರ ಹೊಸ ಕೃತಿ ನಾಟಕಗಳ ಸಂಕಲನ 'ಮಧುರ ಮಿಲನ' ಕಲಬುರಗಿಯ ಖ್ಯಾತ ಸಿದ್ಧಲಿಂಗೇಶ್ವರ ಪ್ರಕಾಶನದಿಂದ ಪ್ರಕಟವಾಗಿ ಬಿಡುಗಡೆಯಾಗುವುದಿತ್ತು. ಶ್ರೀ ಪ್ರಭಾಕರ ಜೋಶಿ ಅವರ ಮುತುವರ್ಜಿಯಿಂದ ನೀರಿಕ್ಷೆಗೂ ಮುನ್ನವೆ ಅಚ್ಚಾಗಿ ಬಿಡುಗಡೆಯ ಭಾಗ್ಯ ಕಾಣುವುದಿತ್ತು. ಆದರೆ, ಪೂಜ್ಯ ಪೇಜಾವರ ಶ್ರೀಗಳು ವೈಕುಂಠ ವಾಸಿಗಳಾದ ಕಾರಣ ಪುಸ್ತಕದ ಲೋಕಾರ್ಪಣೆ ಆಗಲಿಲ್ಲ. ಆದರೆ, ಸವಿತಾ ಇನಾಮದಾರ ಅವರನ್ನು ನೋಡಬೇಕು, ಅವರ ಮಾತುಗಳನ್ನ ಕೇಳ ಬೇಕು, ಅವರೊಂದಿಗೆ ಹರಟಲು ಸಾಹಿತ್ಯಾಸಕ್ತರು ಬಹು ಸಂಖ್ಯೆಯಲ್ಲಿ ನೆರೆದಿದ್ದರು. ಶ್ರೀಗಳ ನಿಧನಕ್ಕೆ ಮೌನ ಆಚರಿಸಿ ಸವಿತಾರನ್ನ ಸನ್ಮಾನಿಸಲು ಸಂಘಟಕರು ನಿರ್ಧರಿಸಿ ಸರಳವಾಗಿಯೇ ಶುರು ಆದ ಕಾರ್ಯಕ್ರಮ ಮುಗಿದಾಗ ಬರೋಬ್ಬರಿ ಮೂರು ತಾಸು ಕಳೆದಿತ್ತು.

ಸನ್ಮಾನವನ್ನು ಅತೀ ವಿನಯದಿಂದ ಸ್ವೀಕರಿಸಿದ ಸವಿತಾ ತಮ್ಮ ಜೀವನದ ವಿವಿಧ ಮಜಲುಗಳನ್ನು ಎಳೆ ಎಳೆಯಾಗಿ ಹೇಳುತ್ತಾ ಹೋದರು. ನಾವುಗಳು ಪರವಶರಾಗಿ ಕೇಳುತ್ತಾ ಹೋದೆವು. ೯೦ ನಿಮಿಷ ಕಳೆದಿತ್ತು ಗೊತ್ತೆ ಆಗಲಿಲ್ಲ. ಕುಂದಗೋಳದ ಚಂದಾ ದೇಸಾಯಿ ಸವಿತಾ ಇನಾಮದಾರ ಆದ ಬಗೆಗಿನ ಕಥನ ಅದ್ಭುತವಾಗಿತ್ತು. ಅಂತರರಾಷ್ಟ್ರೀಯ ವಿವರಣಾಕಾರ್ತಿ, ಅನುವಾದಕಿ (ಕನ್ನಡ, ಹಿಂದಿ, ಇಂಗ್ಲೀಷ್, ಮರಾಠಿ) ರಂಗಕರ್ಮಿ, ಗಾಯಕಿ, ನೃತ್ಯ ಹೀಗೆ ಹತ್ತು ಹಲವು ಪ್ರತಿಭೆಗಳ ಸಂಗಮದಂತಿರುವ ಸವಿತಾ ಇನಾಮದಾರ ಅವರು ಮಾತು ಮುಗಿಸಿದಾಗ ನಮ್ಮೊಳಗೊಬ್ಬರಾಗಿ ಬಿಟ್ಟಿದ್ದರು.

ಕೃತಿಗೆ ಬೆನ್ನುಡಿ ಬರೆದ ನಾನು, ಕಲಬುರಗಿಗೆ ರಂಗಾಯಣದ ನಿರ್ದೇಶಕ ಶ್ರೀ ಪ್ರಭಾಕರ ಜೋಶಿ, ಗುಲ್ಬರ್ಗಾ ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳಾದ ಪ್ರೊ. ಪರಿಮಳ ಅಂಬೇಕರ, ಪ್ರಕಾಶಕ ಶ್ರೀ ಬಸವರಾಜ ಕೊಣೆಕ, ಶ್ರೀ ಶಿವರಾಜ್ ಪಾಟೀಲ ಹಿತ ಮಿತವಾಗಿ ಮಾತಾಡಿದೆವು. ಬೋನಸ್ ರೂಪದಲ್ಲಿ ಶ್ರೀಮತಿ ಲಕ್ಷ್ಮೀಶಂಕರ ಜೋಶಿ ಅವರ ಸಿರಿಕಂಠದ ಗಾಯನ ಲಭಿಸಿತ್ತು. ಸಾಹಿತಿಗಳಾದ ಶ್ರೀ ಸುಬ್ರಾವ್ ಕುಲಕರ್ಣಿ, ಶ್ರೀಮತಿ ಸಂಧ್ಯಾ ಹೊನಗುಂಟೀಕರ್, ಶ್ರೀಮತಿ ಮಧುಮತಿ ಪಾಟೀಲ್, ಗುಲ್ಬರ್ಗಾ ವಿಶ್ವವಿದ್ಯಾಲಯದ ಡೀನ್ ಶ್ರೀಮತಿ ಸುರೇಖಾ ಕ್ಷೀರಸಾಗರ, ಸವಿತಾ ಅವರ ಸಹಪಾಠಿಗಳಾದ ಶ್ರೀ ಪದ್ಮಾಕರ ಕುಲಕರ್ಣಿ, ಶ್ರೀ ಅಮೀರ ಪಟೇಲ್ ಅಲ್ಲದೆ, ಇನಾಮದಾರ ಅವರ ವೈನಿ ಶ್ರೀಮತಿ ಅನಿತಾ, ಕುಟುಂಬದ ಇತರ ಸದಸ್ಯರು ಹಾಗೂ ಇತರ ಆಸಕ್ತರ ಉಪಸ್ಥಿತಿ ಸಮಾರಂಭದ ಕಳೆ ಹೆಚ್ಚಸಿತ್ತು. ದೆಹಲಿ ಕನ್ನಡತಿಯ ಜೀವನೋತ್ಸಾಹಕ್ಕೆ ನಾವೆಲ್ಲ ಮಾರು ಹೋಗಿದ್ದೇವು. ಇಷ್ಟರಲ್ಲಿಯೇ, ಈ ನಾಟಕ ತಮ್ಮೆಲ್ಲರ ಕೈ ಸೇರಲಿದ್ದು, ಪಡೆಯುವುದು ಹೇಗೆ ಎಂದು ಸವಿತಾ ಇನಾಮದಾರ ಅವರೆ ತಿಳಿಸಲಿದ್ದಾರೆ.

***ಮುದಗಲ್ ವೆಂಕಟೇಶ್***

## ಕವನ

### ಇರ್ಕೆ

**ಇರುಳಿಲ್ಲ ಇಲ್ಲಿಲ್ಲ**
**ಇಲ್ಲದದು ಅದು ಅಲ್ಲ**
**ಇದೆಲ್ಲಾ ಅದು ತಿಳಿಯೆ**
**ಅದರಲ್ಲಿ ಇದು ಇಹುದು**
**ಇಲ್ಲ ಎಂಬುದು ಅಲ್ಲ**
**ಅಲ್ಲಾ ಎಂಬುದು ಅದು**
**ಇದೇ ಎಂಬುದು ಸತ್ಯ**
**ಇಲ್ಲಾ ಎಂಬುದು ಮಿಥ್ಯ**
**ದುಃಖದ ಉಡಿಯಲಿಯಿಲ್ಲ**
**ಸುಖದ ಸುಳಿಯಲಿಯಿಲ್ಲ**

***ಡಾ. ಅಹಲ್ಯಾಚಿಂತಾಮಣಿ***

# ದೆಹಲಿ ಕನ್ನಡಿಗರ ನಂಟು ಬಿಡಿಸಲಾಗದ ಗಂಟು



ನನ್ನೆಲ್ಲಾ ಆತ್ಮೀಯ ದೆಹಲಿ ಕನ್ನಡಿಗರಿಗೆ 2020 ಹೊಸ ವರ್ಷದ ಹಾರ್ದಿಕ ಶುಭಾಶಯಗಳು ಹಾಗೂ ಒಲವಿನ ನಮನಗಳು.

ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ನಮ್ಮ ನಾಡು, ನುಡಿ, ಸಂಸ್ಕೃತಿ, ಸಾಹಿತ್ಯದ ಬೆಳವಣಿಗೆಗೆ ಸದಾ ಸ್ಪಂದಿಸುತ್ತಾ ನಮ್ಮ ಪ್ರೀತಿಯ ಕನ್ನಡಿಗರು ತಮ್ಮದೇ ಆದ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ಕನ್ನಡದ ತೇರನೆಳೆಯುವ ಕೈಂಕರ್ಯದಲ್ಲಿ ಸದಾ ಉತ್ಸಾಹದಿಂದ ಕೈ ಜೋಡಿಸಿದ್ದಾರೆ. ಇಂತಹ ಒಂದು ಸತ್ಕಾರ್ಯದಲ್ಲಿ ಭಾಗಿಯಾಗುವ ಸುಯೋಗ ನನ್ನದು.

14 ವರ್ಷಗಳ ನನ್ನ ದೆಹಲಿ ವಾಸ್ತವ್ಯದಲ್ಲಿ ಸುಮಾರು ಒಂದು ದಶಕಗಳ ಕಾಲ ದೆಹಲಿ ಕರ್ನಾಟಕ ಸಂಘದಲ್ಲಿ ಸಕ್ರಿಯವಾಗಿ ಸೇವೆ ಸಲ್ಲಿಸುವ ಸದವಕಾಶ. 2004ರಲ್ಲಿ ಈ ನಮ್ಮ ಭವ್ಯ ಸಮುಚ್ಚಯ ನಿರ್ಮಾಣದ ಸಂದರ್ಭದಲ್ಲಿ ಮೊದಲ ಬಾರಿಗೆ ದೆಹಲಿ ಕರ್ನಾಟಕ ಸಂಘದ ಆಡಳಿತ ಮಂಡಳಿಯ ಸದಸ್ಯೆಯಾಗಿ ಪದಾರ್ಪಣೆ ಮಾಡಿದೆ. ಮುಂದೆ ಜಂಟಿ ಕಾರ್ಯದರ್ಶಿಯಾಗಿ, ಸತತ ಎರಡು ಬಾರಿ ಉಪಾಧ್ಯಕ್ಷೆಯಾಗಿ ಸೇವೆ ಸಲ್ಲಿಸಿದೆ. ಸಮುಚ್ಚಯ ನಿರ್ಮಾಣದ ಸಂದರ್ಭದಲ್ಲಿ ಅಂದಿನ ಅಧ್ಯಕ್ಷರಾದ ಡಾ. ಪುರುಷೋತ್ತಮ ಬಿಳಿಮಲೆ ಅವರೊಂದಿಗೆ ಪ್ರತಿ ಹಂತದಲ್ಲೂ ಕೈ ಜೋಡಿಸಿದ್ದೇನೆ.

ಸಂಘದ ಮುಖಪತ್ರಿಕೆ 'ಅಭಿಮತ'ದ ಪ್ರಧಾನ ಸಂಪಾದಕಿಯಾಗಿ ಗುರುತರ ಜವಾಬ್ದಾರಿಯನ್ನು ಸುಮಾರು 9ವರ್ಷಗಳ ಕಾಲ ಯಶಸ್ವಿಯಾಗಿ ನಿರ್ವಹಿಸಿದ ಹೆಮ್ಮೆ ನನ್ನದು. ಸಂಪಾದಕ ಮಂಡಳಿಯ ಸಂಪೂರ್ಣ ಸಹಕಾರದೊಂದಿಗೆ ವಿಭಿನ್ನವಾಗಿ, ವಿನೂತನವಾಗಿ ಅಭಿಮತವನ್ನು ತರುವಲ್ಲಿ ಶ್ರಮಿಸಿದ್ದೇನೆ. ಈ ನಿಟ್ಟಿನಲ್ಲಿ ನನ್ನೊಂದಿಗೆ ಪ್ರೀತಿಯಿಂದ ಸಹಕರಿಸಿದ ನನ್ನೆಲ್ಲಾ ಸ್ನೇಹಿತರಿಗೆ ಕೃತಜ್ಞಳಾಗಿದ್ದೇನೆ.

7 ದಶಕಗಳಿಗೂ ಮಿಗಿಲಾದ ಭವ್ಯ ಇತಿಹಾಸವುಳ್ಳ ದೆಹಲಿ ಕರ್ನಾಟಕ ಸಂಘ ನೂರಾರು ಮಹನೀಯರು ನೀಡಿದ ಕೊಡುಗೆ. ಹೊರನಾಡ ಕನ್ನಡಿಗರ ಹೆಮ್ಮೆಯ ಪ್ರತೀಕ. ದಿವಂಗತ ಸರೋಜಿನಿ ಮಹಿಷಿ, ನರಹರಿರಾವ್, ಕೃಷ್ಣಮೂರ್ತಿ ರಾವ್, ಜಿ.ವೈ. ಕೃಷ್ಣನ್, ಗೋಪಾಲಶಾಸ್ತ್ರಿ, ಐ. ರಾಮಮೋಹನ ರಾವ್, ಎನ್.ಪಿ. ಭಟ್, ಕೆ.ಆರ್. ನಾಗರಾಜ್ ಇನ್ನೂ ಮೊದಲಾದ ಹಿರಿಯ ಕನ್ನಡಿಗರ ಶ್ರಮದ ಫಲ ಈ ನಮ್ಮ ಭವ್ಯ ಸೌಧ. ಈ ಎಲ್ಲ ಹಿರಿಯ ಚೇತನಗಳಿಗೆ ನನ್ನ ಗೌರವಪೂರ್ವಕ ನಮನಗಳು.

ಈ ಮಹಾನ್ ಸಾಗರದ ಮುಂದೆ ಒಂದು ಬಿಂದುವಾಗಿ ನಾನು ಸಲ್ಲಿಸಿದ ಸೇವೆಯನ್ನು ಗುರುತಿಸಿ 2019ರ ರಾಜ್ಯೋತ್ಸವ ಸಂದರ್ಭದಲ್ಲಿ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿ ನೀಡಿ ಗೌರವಿಸಿದ್ದಕ್ಕಾಗಿ ನಾನು ದೆಹಲಿ ಕರ್ನಾಟಕ ಸಂಘಕ್ಕೆ ಎಂದೆಂದೂ ಆಭಾರಿಯಾಗಿದ್ದೇನೆ. ನಾಡು, ನುಡಿಗಾಗಿ ಸಲ್ಲಿಸಿದ ಕಿಂಚಿತ್ ಸೇವೆ ಸಾರ್ಥಕವೆನಿಸಿದೆ.

ಈ ಸಂದರ್ಭದಲ್ಲಿ ನನಗೆ ಸದಾ ಪ್ರೋತ್ಸಾಹ ನೀಡಿ ಸಹಕರಿಸಿದ ಅಂದಿನ ಅಧ್ಯಕ್ಷರಾದ ಡಾ. ಪುರುಷೋತ್ತಮ ಬಿಳಿಮಲೆ, ಸಿ.ವಿ. ಗೋಪಿನಾಥ್ ಹಾಗೂ ಡಾ. ವೆಂಕಟಾಚಲ ಹೆಗಡೆ ಅವರಿಗೆ ಮನಃಪೂರ್ವಕ ಧನ್ಯವಾದಗಳು.

ನನ್ನ ಅಭಿವ್ಯಕ್ತಿಗೆ ಸಮರ್ಥ ವೇದಿಕೆಯಾಗಿ ದೆಹಲಿ ಕರ್ನಾಟಕ ಸಂಘ ದೊರೆತದ್ದು ನಿಜಕ್ಕೂ ನನ್ನ ಅದೃಷ್ಟವೆಂದೇ ನಾನು ಭಾವಿಸಿದ್ದೇನೆ. ನನ್ನ ಸಮಯವನ್ನು ಸದ್ವಿನಿಯೋಗ ಮಾಡಿದ ಸಂತೃಪ್ತಿ ಸದಾ ನನಗಿದೆ. ನನ್ನ ಜೀವಿತದ ಅವಿಸ್ಮರಣೀಯ ದಿನಗಳನ್ನು ನಾನೆಂದೂ ಮರೆಯಲಾರೆ. ಇದಕ್ಕಾಗಿ ಸಂಘಕ್ಕೆ ನಾನು ಚಿರ ಋಣಿಯಾಗಿದ್ದೇನೆ. ಸಾಮಾಜಿಕ ಸೇವೆ ಎಂದೂ ನಮ್ಮ ಆತ್ಮ ತೃಪ್ತಿಗಾಗಿಯೇ ಹೊರತು ಯಾವುದೇ ಸ್ವಾರ್ಥ ಸಾಧನೆಗಾಗಿ ಅಲ್ಲ ಎಂಬುದು ನನ್ನ ದೃಢವಾದ ವಿಶ್ವಾಸ. ಪ್ರಶಸ್ತಿ.. ಪುರಸ್ಕಾರಗಳು ಗೌಣ.. ವಿಶಿಷ್ಟ ಕನ್ನಡಿಗ ಪ್ರಶಸ್ತಿ ನಿಜಕ್ಕೂ ಅನಿರೀಕ್ಷಿತ. ನನ್ನ ನಿಸ್ವಾರ್ಥ ಸೇವೆಯನ್ನು ಗುರುತಿಸಿ ವಿಶಿಷ್ಟ ಕನ್ನಡಿಗ ಪ್ರಶಸ್ತಿ ನೀಡಲು ಪ್ರೀತಿಯಿಂದ ನನ್ನನ್ನು ಆಹ್ವಾನಿಸಿ ಆದರಿಸಿದ ಸಂಘದ ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆ, ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಹಾಗೂ ಆಡಳಿತ ಮಂಡಳಿಯ ಎಲ್ಲ ಪದಾಧಿಕಾರಿಗಳಿಗೂ ನನ್ನ ಹೃತ್ಪೂರ್ವಕ ಧನ್ಯವಾದಗಳು.

ದೆಹಲಿ ಕನ್ನಡಿಗರ ಪ್ರೀತಿ, ಸ್ನೇಹ, ಅಭಿಮಾನಕ್ಕೆ ಶರಣು ಶರಣಾರ್ಥಿಗಳು. ದೆಹಲಿಯ ಬಾಂಧವ್ಯ ನಿರಂತರವಾಗಿ ಸಾಗುತ್ತಿರಲಿ ಎಂದು ಆಶಿಸುತ್ತೇನೆ.

***ಉಷಾ ಭರತಾದ್ರಿ***




**ದೆಹಲಿ ಕರ್ನಾಟಕ ಸಂಘದ**
**ಸುಸಜ್ಜಿತವಾದ ಆರ್ಟ್ ಗ್ಯಾಲರಿ**
**ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ.**
**ಹೆಚ್ಚಿನ ಮಾಹಿತಿಗಾಗಿ**
**ದೆಹಲಿ ಕರ್ನಾಟಕ ಸಂಘದ**
**ಕಾರ್ಯಾಲಯವನ್ನು ಸಂಪರ್ಕಿಸಿರಿ.**
**ದೂರವಾಣಿ :**
**011–26109615 / 26104818**

# ಕುರುಕ್ಷೇತ್ರ ಪ್ರವಾಸ



ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು, ದೆಹಲಿ ಘಟಕದ ವತಿಯಿಂದ ಮಕ್ಕಳಲ್ಲಿ ಪುರಾಣ ಮತ್ತು ಇತಿಹಾಸ ಪ್ರಜ್ಞೆಯನ್ನು ಬೆಳೆಸುವ ಸಲುವಾಗಿ ದೆಹಲಿ ಕನ್ನಡ ಶಾಲೆಯ ಕನ್ನಡ ಮಕ್ಕಳಿಗಾಗಿ ಕುರುಕ್ಷೇತ್ರ ಪ್ರವಾಸವನ್ನು ಇತ್ತೀಚೆಗೆ ಆಯೋಜಿಸಲಾಗಿತ್ತು. ಶಿಕ್ಷಕರು, ಪಾಲಕರು ಹಾಗೂ ವಿದ್ಯಾರ್ಥಿಗಳು ಸೇರಿ ಒಟ್ಟು 55 ಜನರ ತಂಡದಲ್ಲಿ 40 ಮಕ್ಕಳು ಭಾಗವಹಿಸಿದ್ದರು. ದೆಹಲಿಯ ಕರ್ನಾಟಕ ಉದ್ಯೋಗ ಮಿತ್ರ ಇದರ ನಿವಾಸಿ ನಿರ್ದೇಶಕರು ಹಾಗೂ ಪರಿಷತ್ತಿನ ಗೌರವಾಧ್ಯಕ್ಷ ಪಿ. ಜಯರಾಜ್ ಅವರು ಪ್ರವಾಸಕ್ಕೆ ಚಾಲನೆ ನೀಡಿ ಈ ಪ್ರವಾಸದಿಂದ ಮಕ್ಕಳು ನಮ್ಮ ಇತಿಹಾಸ ಪರಂಪರೆಯನ್ನು ತಿಳಿಯಲು ಸಹಾಯಕವಾಗುತ್ತದೆ ಎಂದರು.

ಪೂರ್ವಾಹ್ನ 7.30ಕ್ಕೆ ದೆಹಲಿ ಕನ್ನಡ ಶಾಲೆಯಿಂದ ಹೊರಟು ಅಪರಾಹ್ನ 12 ಗಂಟೆಗೆ ಕುರುಕ್ಷೇತ್ರಕ್ಕೆ ತಲುಪಿದೆವು.

ಇಲ್ಲಿ ಏಷ್ಯಾದಲ್ಲಿಯೇ ಅತೀ ದೊಡ್ಡ ಮಾನವ ನಿರ್ಮಿತ ಸರೋವರವಾದ ಬ್ರಹ್ಮ ಸರೋವರವನ್ನು ವೀಕ್ಷಿಸಲಾಯಿತು.


ಅಲ್ಲದೆ ಶ್ರೀ ಕೃಷ್ಣನ ಇರುವಿಕೆಯ ಕುರುಹುಗಳಿರುವ ಸ್ಥಳ ಶ್ರೀ ಕೃಷ್ಣ ವಸ್ತು ಸಂಗ್ರಾಲಯದಲ್ಲಿ ಮಕ್ಕಳೆಲ್ಲರೂ ಕೃಷ್ಣನ ಜೀವನದ ಲೀಲೆಗಳನ್ನು ಸಾರುವ ದೃಶ್ಯಚಿತ್ರಗಳು ಹಾಗೂ ಮಹಾಭಾರತದ ಕುರುಹುಗಳನ್ನು ವೀಕ್ಷಿಸಿದರು.

ಕೊನೆಗೆ ಶ್ರೀ ಕೃಷ್ಣ ಅರ್ಜುನನಿಗೆ ಗೀತೆ ಬೋಧಿಸಿದ ಸ್ಥಳವಾದ ಜ್ಯೋತಿಸರ್ ಇದನ್ನು ಕಂಡು ರೋಮಾಂಚನಗೊಂಡರು. ಇಲ್ಲಿ ಕು। ಮಹೇಶ್, ಕು। ಪಾರ್ವತಿ, ಕು। ಶ್ರೇಷ್ಠಾ ಎಚ್. ತೇಲಿ, ಕು। ಶ್ರೇಯಾ ಎಚ್. ತೇಲಿ, ಕು। ಅಭಿಷೇಕ ಉಭಾಳೆ, ಕು। ಕುಶಾಲ್ ಎಂ. ಮಹಾಭಾರತದ ಪಾತ್ರಗಳ ಮತ್ತು ಭಗವದ್ಗೀತೆಯ ಕುರಿತಾಗಿ ತಮ್ಮ ವಿಚಾರಧಾರೆಯನ್ನು ಮಂಡಿಸಿದರು. ಪ್ರವಾಸದುದ್ದಕ್ಕೂ ಮಾರ್ಗದರ್ಶಕರು ಮಕ್ಕಳಿಗೆ ಬೇಕಾದಂತಹ ಎಲ್ಲಾ ಅಗತ್ಯ ಮಾಹಿತಿಗಳನ್ನು ವಿವರವಾಗಿ ನೀಡಿ ಸಹಕರಿಸಿದರು.

ಶಿಶುಗೀತೆಗಳು, ಭಾವಗೀತೆಗಳು, ಅಂತ್ಯಾಕ್ಷರಿ, ಆಶುಭಾಷಣ, ಚರ್ಚೆ ಮುಂತಾದ ಹಲವಾರು ಕನ್ನಡ ಚಟುವಟಿಕೆಗಳಲ್ಲಿ ಮಕ್ಕಳೆಲ್ಲರೂ ಉತ್ಸಾಹದಿಂದ ಪಾಲ್ಗೊಂಡರು. ಕಾರ್ಯಕ್ರಮ ಸಂಯೋಜಿಸಿದ ಪರಿಷತ್ತಿನ ಅಧ್ಯಕ್ಷ ಅರವಿಂದ ಬಿಜೈ, ಉಪಾಧ್ಯಕ್ಷ ಎಚ್.ಎಸ್. ತೇಲಿ, ಪರಿಷತ್ತಿನ ಕೇಂದ್ರ ಘಟಕದ ಸದಸ್ಯ ಅರುಣ್, ಶಿಕ್ಷಕರಾದ ಗುರುದೇವಿ, ಶಿವರಾಮ ಮಣಿಯಾಣಿ, ಶ್ರೀದೇವಿ ಅವರು ಉಪಸ್ಥಿತರಿದ್ದು ಪ್ರವಾಸವನ್ನು ಯಶಸ್ವಿಗೊಳಿಸಿದರು.

***ಅರವಿಂದ ಬಿಜೈ***

## ಕಂಬನಿ



ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯಲ್ಲಿ 1983 ರಿಂದ 1992ರ ಅವಧಿಯಲ್ಲಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದ ಶ್ರೀ ಎಂ.ಎಚ್. ಪೂಜಾರಿ ಅವರು ತಮ್ಮ ಹುಟ್ಟೂರು ಕುಂದಾಪುರದಲ್ಲಿ ದಿನಾಂಕ **30.12.2019** ನಿಧನರಾಗಿರುತ್ತಾರೆಂದು ತಿಳಿಸಲು ವಿಷಾದಿಸುತ್ತೇವೆ.

ಅಗಲಿದ ಹಿರಿಯ ಚೇತನ ಶ್ರೀ ಎಂ.ಎಚ್. ಪೂಜಾರಿ ಅವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ

# ದೆಹಲಿ ಕರ್ನಾಟಕ ಸಂಘದ ಪ್ರಕಟಣೆಗಳು

**ದೆಹಲಿ ಕನ್ನಡ ಸಂಪುಟ**
(ವಿವಿಧ ಸಾಹಿತ್ಯ)
ಪ್ರಧಾನ ಸಂಪಾದಕ : ಬೊಳುವಾರು ಮಹಮದ್ ಕುಂಞ
ಸಂಪಾದಕರು : ಸುಭಾ ಸಿನ್ಹೂರ ದಾಸ್
ಚೆನ್ನು ಎಸ್. ಮಠದ
ವೆಂಕಟಾಚಲ ಹೆಗಡೆ
ಎಸ್. ಕೃಷ್ಣ ಭಟ್
ವರ್ಷ : 1994. ರೂ. 30/-

**ರಾಜಧಾನಿಯಲ್ಲಿ ಕರ್ನಾಟಕ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ಡಾ. ಪುರುಷೋತ್ತಮ ಬಿಳಿಮಲೆ
ಸಂಪಾದಕರು : ವೈ. ಅವನೀಂದ್ರನಾಥ್ ರಾವ್
ರೇಣುಕಾ ನಿಡಗುಂದಿ
ವರ್ಷ : 2006. ರೂ. 75/-

**ಸಿಡಿಲಿನ ಬಡಿತ**
**ಹಾಗೂ ಏನಿದೆ ಈ ಮುದುಕನ ಗುಟ್ಟು?**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2005. ರೂ. 50/-

**ಜರ್ನಿ ಟು ವಾರ್ಧಾ** (ಆಂಗ್ಲ ಕೃತಿ)
ಕನ್ನಡ ಮೂಲ : ಸಿದ್ದವನಹಳ್ಳಿ ಕೃಷ್ಣ ಶರ್ಮ
ಅನುವಾದ : ಎಚ್.ವೈ. ಶಾರದಾಪ್ರಸಾದ್
ವರ್ಷ : 2014. ರೂ. 100/-

**ದೇವರು ಎದ್ದು ಬಂದಾಗ**
(ನಾಟಕ)
ಮರಾಠಿ ಮೂಲ : ಡಾ. ಪು.ಲ. ದೇಶಪಾಂಡೆ
ಕನ್ನಡ ರೂಪಾಂತರ : ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ನಮ್ಮಿಬ್ಬರ ನಡುವೆ**
(ಕವಿತೆಗಳು)
ರೇಣುಕಾ ನಿಡಗುಂದಿ
ವರ್ಷ : 2017. ರೂ. 50/-

**ರಂಗಿನೋಕುಳಿ**
(ಕವನ ಸಂಕಲನ)
ಸವಿತಾ ಇನಾಮದಾರ್
ವರ್ಷ : 2017. ರೂ. 50/-

**ನಾನು–ನೀನು**
(ಕವನ ಸಂಕಲನ)
ಸುಧಾಕರ ಕುರಂದವಾಡ
ವರ್ಷ : 2015. ರೂ. 100/-

**ನಿರಂಜನ ಕೃತಿ ಸ್ಮೃತಿ**
**ನಿರಂಜನ ನೀಲಾಂಜನ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ವಸಂತ ಶೆಟ್ಟಿ ಬೆಳ್ಳಾರೆ
ವರ್ಷ : 2017. ರೂ. 200/-

**ಅಕವಿತೆ**
(ಕವನ ಸಂಕಲನ)
ಡಾ. ಅಹಲ್ಯಾಚಿಂತಾಮಣಿ
ವರ್ಷ : 2017. ರೂ. 100/-


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**
**PRINTING PRESS**
A HOUSE OF QUALITY PRINTING
Office :
C-95, Okhla Industrial Area
Phase-I, New Delhi – 110 020
Ph : 40520770
M : 9811104398, 9811604398

Delhi Karnataka Sangha Abhimata
Jan-2020, Vol. No.30, Issue No.4, Price Rs.1/-
RNI Regn. No. 53405/91, DL-SW-1/4016/19-21
Date of Publication : Jan 8th / 9th, Posting Date :10th / 11th, Total Pages-24, Monthly-Language Kannada
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Dr. Avanindranath Rao Y

